# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 22 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 25–07–2023 ಮಂಗಳವಾರ | ಪುಟ: 4 | ಬೆಲೆ : ರೂ.2–00

Volume - 01 Issue - 22 | Title- Code: KARKAN 28269 | Chitradurga | Date: 25-07-2023 Tuesday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಗೋವಿಂದಪ್ಪ ನೇತೃತ್ವದಲ್ಲಿ ಭದ್ರಾ ಮೇಲ್ದಂಡೆ ಕಾಮಗಾರಿ ಪೂರ್ಣ: ಸಚಿವ 2

ಪತ್ರಿಕೆಗಳು ಶೋಷಿತ ವರ್ಗಗ ಹಾಗೂ ಕಡು ಬಡವರ ಧ್ವನಿಯಾಗಲಿ: ಶಾಸಕ ಟಿ.ರಘುಮೂರ್ತಿ 3

ಚಿಕ್ಕಮಗಳೂರಲ್ಲಿ ಧಾರಾಕಾರ ಮಳೆ; ಅಪಾಯದ ಮಟ್ಟ ಮೀರಿದ ತುಂಗಾ ನದಿ 4


## ಫಾಸ್ಟ್ ನ್ಯೂಸ್

### ಕಾಂಗ್ರೆಸ್ ಸರ್ಕಾರ ಕೆಡವಲು ವಿದೇಶದಲ್ಲಿ ಕುಳಿತು ಷಡ್ಯಂತ್ರ: ಡಿಕೆಶಿ



» ಬೆಂಗಳೂರು

ರಾಜ್ಯದಲ್ಲಿ ಬಹುಮತದಿಂದ ಅಧಿಕಾರದಲ್ಲಿರುವ ಕಾಂಗ್ರೆಸ್ ಸರ್ಕಾರವನ್ನು ಬೀಳಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸ್ಫೋಟಕ ಹೇಳಿಕೆ ನೀಡಿದ್ದಾರೆ. ವಿದೇಶದಲ್ಲಿ ಕುಳಿತು ಪ್ರಯತ್ನಗಳನ್ನು ಮಾಡಲಾಗುತ್ತಿದೆ ಎಂದು ಹೇಳಿದ್ದಾರೆ. ಈ ಬಗ್ಗೆ ಮಾಧ್ಯಮಗಳೊಂದಿಗೆ ಸದಾಶಿವನಗರದ ನಿವಾಸದ ಬಳಿ ಮಾತನಾಡಿದ ಅವರು, ಸಿಂಗಾಪುರದಲ್ಲಿ ಸರ್ಕಾರ ಬೀಳಿಸುವ ಕೆಲಸ ನಡೆಯುತ್ತಿದೆ. ಇದೆಲ್ಲಾ ಒಂದು ತಂತ್ರವಾಗಿದೆ. ಇದರ ಬಗ್ಗೆ ನಮಗೂ ಮಾಹಿತಿ ಬಂದಿದೆ ಎಂದರು. ಬೆಂಗಳೂರಿನಲ್ಲಿ ಆಪರೇಷನ್ ಮಾಡಿದ್ರೆ ಗೊತ್ತಾಗುತ್ತೆ ಅಂತ, ಈಗ ಸಿಂಗಾಪುರದಲ್ಲಿ ಕೂತು ಆಪರೇಷನ್ ಮಾಡ್ತಿದ್ದಾರೆ ಎಂದು ನೇರವಾಗಿ ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರ ಮೇಲೆ ಆರೋಪ ಮಾಡಿದ್ದಾರೆ.

# ಮಕ್ಕಳು ನಿರಂತರ ಅಭ್ಯಾಸದಿಂದ ಯಶಸ್ಸು ಸಾಧ್ಯ: ಸಚಿವ ಡಿ.ಸುಧಾಕರ್

» ಚಿತ್ರದುರ್ಗ

ಮಕ್ಕಳು ವಿದ್ಯಾರ್ಥಿ ಜೀವನದಲ್ಲಿ ಪುಸ್ತಕ ಅಭ್ಯಾಸ ಜೊತೆಗೆ ಸಾಮಾನ್ಯ ಜ್ಞಾನ ಮಕ್ಕಳ ಆತ್ಮವಿಶ್ವಾಸ ಹೆಚ್ಚಿಸುತ್ತದೆ ಎಂದು ಯೋಜನೆ ಮತ್ತು ಸಾಂಖ್ಯಿಕ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಹೇಳಿದರು.

ನಗರದ ತರಾಸು ರಂಗಮಂದಿರದಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಬೆಂಗಳೂರು ಶಾಖೆ ಚಿತ್ರದುರ್ಗ ಇವರ ಆಯೋಜಿಸಿದ್ದ ಚಿತ್ರದುರ್ಗ ಜಿಲ್ಲಾ ನೂತನ ಉಸ್ತುವಾರಿ ಸಚಿವರು ಮತ್ತು ಚಿತ್ರದುರ್ಗ ಜಿಲ್ಲೆಯ ನೂತನ ಶಾಸಕರಿಗೆ ಸನ್ಮಾನ ಮತ್ತು 2022–23 ನೇ ಸಾಲಿನಲ್ಲಿ ಎ□□□□□□□ಲ್ ಸಿ ಮತ್ತು ಪಿಯುಸಿ ಯಲ್ಲಿ ಅತಿ ಹೆಚ್ಚು ಅಂಕ ಪಡೆದ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು.

ಪ್ರಸ್ತುತ ದಿನದಲ್ಲಿ ಎಲ್ಲಾ ವರ್ಗದ ಮಕ್ಕಳು ಉತ್ತಮವಾಗಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆ.ಈ ಮೊದಲು ಶಿಕ್ಷಣ ಕ್ಷೇತ್ರದಲ್ಲಿ ಸುಧಾರಣೆ ಆಗಿರಲಿಲ್ಲ. ಈಗ ಎಲ್ಲಾ ಸಮಾಜದವರಿಗೆ ಸರ್ಕಾರದ ಸೌಲಭ್ಯ ನೀಡುತ್ತಿದ್ದು ಕಷ್ಟಪಟ್ಟು ಅಧ್ಯಯನ ಮಾಡಿದರೆ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದರು.ಮಹಾತ್ಮ ಗಾಂಧೀಜಿ ಅವರು ಅಹಿಂಸೆಯ ಮೂಲಕ ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟರು.ಗಾಂಧೀಜಿಯವರ ತತ್ವಗಳನ್ನು ಮಕ್ಕಳು ವಿದ್ಯಾರ್ಥಿ ಜೀವನದಲ್ಲಿ ಆಳವಡಿಕೊಳ್ಳಬೇಕು.ಮಕ್ಕಳು ಪುಸ್ತಕದ ಅಧ್ಯಯನ ಜೊತೆಗೆ ನಿತ್ಯ ದಿನ ಪತ್ರಿಕೆ ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಪುಸ್ತಕದ ಜೊತೆ ಸಾಮಾನ್ಯ ಜ್ಞಾನ ಸಹ ಅಗತ್ಯವಾಗಿ ಬೇಕಿದೆ.ದೇಶದಲ್ಲಿ ನಿತ್ಯದ ಬದಲಾವಣೆಯ ವಿಷಯಗಳನ್ನು ತಿಳಿದುಕೊಳ್ಳಬೇಕು. ಸಿಎಂ ಸಿದ್ದರಾಮಯ್ಯ ಅವರು ಅಧಿಕಾರ ವಹಿಸಿಕೊಂಡ ನಂತರ ಐದು ಗ್ಯಾರೆಂಟಿಗಳನ್ನು ಜಾರಿಗೊಳಿಸಿ ನುಡಿದಂತೆ ನಡೆದಿದ್ದಾರೆ. ಅಭಿವೃದ್ಧಿ ಹಣ ಕಡಿಮೆ ಬಂದರು ಸಹ ಮುಂದಿನ ದಿನದಲ್ಲಿ ಅತ್ಯಂತ ಹೆಚ್ಚಿನ ಅನುದಾನ ತಂದು ಅಭಿವೃದ್ಧಿ ಮಾಡಲಾಗುತ್ತದೆ. ಸರ್ಕಾರಿ ನೌಕರರು ಸರ್ಕಾರಕ್ಕೆ ಸಹಕಾರ ನೀಡಬೇಕು ಮತ್ತು ನೌಕರರ ಪರವಾಗಿ ಸರ್ಕಾರ ಸದಾ ಇರುತ್ತದೆ ಎಂದು ಭರವಸೆ ನೀಡಿದರು.

ಶಾಸಕ ಟಿ.ರಘುಮೂರ್ತಿ ಮಾತನಾಡಿ ಕಾಂಗ್ರೆಸ್ ಸರ್ಕಾರದಐದುಗ್ಯಾರೆಂಟಿಗಳಿಂದ ಸರ್ಕಾರಿ ನೌಕರರಿಗೆ ಸಾಕಷ್ಟು ಅನುಕೂಲವಾಗಿದೆ ಎಂದು ಸಂಘದ ರಾಜ್ಯಧ್ಯಕ್ಷ ಷಡಾಕ್ಷರಿ ಸ್ಮರಿಸಿರುವುದು ಸಂತಸ ವಿಚಾರವಾಗಿದೆ.ಸಮಾಜದಲ್ಲಿ ಬದಲಾವಣೆ ಆಗಲು ಸರ್ಕಾರಿ ನೌಕರರು ತಮ್ಮ ಇಲಾಖೆಯಲ್ಲಿ ಇಚ್ಚಾಶಕ್ತಿ ಮೂಲಕ ಕೆಲಸ ಮಾಡಬೇಕು. ಸರ್ಕಾರಿ ನೌಕರರಿಗೆ ರಾಜಕಾರಣ ಅವಶ್ಯಕತೆ ಇಲ್ಲ.

ಪುಟ 3



> ಮಕ್ಕಳು ಸಮಾಜದಲ್ಲಿನ ಎಲ್ಲಾ ವಿಷಯಗಳನ್ನು ಮಕ್ಕಳು ತಿಳಿದಕೊಂಡು ಸಾಮಾಜಿಕ ಕಳಜಿ ಬೆಳೆಸಿಕೊಳ್ಳಬೇಕಿ.ಪಠ್ಯಕ್ಕೆ ಸೀಮಿತವಾಗದೇ ದಿನ ಪತ್ರಿಕೆ ಮತ್ತು ಸ್ಪರ್ಧಾತ್ಮಕ ಪುಸ್ತಕಗಳು ನಿರಂತರ ಅಧ್ಯತನದಿಂದ ಕೆಎಎಸ್ ಮತ್ತು ಐಎಎಸ್ ಹುದ್ದೆಗಳನ್ನು ಅಂಲಕರಿಸಲು ಅವಕಾಶ ಇದೆ.
>
> » ಟಿ.ರಘುಮೂರ್ತಿ ಶಾಸಕರು ಚಳ್ಳಕೆರೆ ಕ್ಷೇತ್ರ

# ಮಂತ್ರಾಲಯದಲ್ಲಿ 108 ಅಡಿ ಎತ್ತರದ ಶ್ರೀರಾಮ ಪ್ರತಿಮೆ ನಿರ್ಮಾಣಕ್ಕೆ ಅಡಿಗಲ್ಲು

» ರಾಯಚೂರು

ದೇಶದಲ್ಲಿ ಹಿಂದೂಗಳ ಆರಾಧ್ಯ ದೈವವಾದ ಶ್ರೀರಾಮನ ಭವ್ಯವಾದ ಮಂದಿರವನ್ನು ಅಯೋಧ್ಯೆಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಇದರ ಬೆನ್ನಲ್ಲಿಯೇ ಶ್ರೀ ಗುರು ರಾಘವೇಂದ್ರನ ಸನ್ನಿಧಿಯಾದ ಮಂತ್ರಾಲಯದಲ್ಲಿ 108 ಅಡಿ ಎತ್ತರದ ಶ್ರೀರಾಮನ ಪ್ರತಿಮೆ ನಿರ್ಮಾಣಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಅಡಿಗಲ್ಲು ಹಾಕಿ ಚಾಲನೆ ನೀಡಿದ್ದಾರೆ.

ಮಂತ್ರಾಲಯದಲ್ಲಿ 108 ಅಡಿ ಶ್ರೀರಾಮನ ಪ್ರತಿಮೆಗೆ ಅಡಿಗಲ್ಲು ಕಾರ್ಯಕ್ರಮವನ್ನು ನೆರವೇರಿಸಲಾಯಿತು. ಇನ್ನು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಅವರು, ವರ್ಚುವಲ್ ಮೂಲಕ ಅಡಿಗಲ್ಲು ಹಾಕಿದರು. ಮಂತ್ರಾಲಯದಲ್ಲಿ ನಿರ್ಮಾಣವಾಗಲಿರುವ 108 ಅಡಿ ಎತ್ತರದ ಶ್ರೀರಾಮನ ಪ್ರತಿಮೆಗೆ ಭೂಮಿ ಪೂಜೆಯನ್ನು ಅದ್ಧೂರಿಯಾಗಿ ನೆರವೇರಿಸಲಾಯಿತು. ಇದೇ ವೇಳೆ ಮಂತ್ರಾಲಯದ ಪೀಠಾಧಿಪತಿ ಡಾ.ಸುಬುಧೇಂದ್ರ ತೀರ್ಥರು ಭೌತಿಕವಾಗಿ ಭೂಮಿ ಪೂಜೆಯನ್ನು ನೆರವೇರಿಸಿದರು.



ಕಾರ್ಯಕ್ರಮದಲ್ಲಿ ಆಂಧ್ರ ಪ್ರದೇಶ ರಾಜ್ಯದ ಹಲವು ಸಚಿವರುಗಳು ಹಾಗೂ ಗಣ್ಯರು ಭಾಗಿಯಾಗಿದ್ದರು. ಅಪಾರ ಭಕ್ತರ ಸಮ್ಮುಖದಲ್ಲಿ ನಡೆದ ಭೂಮಿ ಪೂಜಾ ಕಾರ್ಯಕ್ರಮ ನೆರವೇರಿತು.

**ದೇಶದಲ್ಲಿಯೇ ಅತಿದೊಡ್ಡ ಶ್ರೀರಾಮನ ಪ್ರತಿಮೆ:** ದೇಶದಲ್ಲೇ ಅತಿ ದೊಡ್ಡ ಶಿಲಾಮೂರ್ತಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ 108 ಅಡಿ ಉದ್ದದ ಶ್ರೀರಾಮನ ಮೂರ್ತಿ ಮಂತ್ರಾಲಯದಲ್ಲಿಸ್ಥಾಪಿಸಲಾಗುವುದು.ಪ್ರತಿಮೆಯನ್ನು ಕೆತ್ತಲು ಡಿಜಿಟಲ್ ತಂತ್ರಜ್ಞಾನವನ್ನು ಬಳಸಲಾಗುವುದು. ವಿಶೇಷ ಯೋಜನೆಗೆ ಅಂದಾಜು6ಕೋಟಿರೂ.ವೆಚ್ಚವಾಗಬಹುದು ಎಂದು ಅಂದಾಜಿಸಲಾಗಿದೆ. ಪುರಾಣದ ಪ್ರಕಾರ, ಶ್ರೀರಾಮನು ಸೀತಾದೇವಿಯನ್ನು ಹುಡುಕಲು ಲಂಕೆಗೆ ತೆರಳುತ್ತಿದ್ದಾಗ ಇಲ್ಲಿ ಆಶ್ರಯ ಪಡೆದಿದ್ದನು ಎಂಬ ನಂಬಿಕೆಯಿದೆ. ಆದ್ದರಿಂದ ಬೃಂದಾವನದಲ್ಲಿ ಪ್ರತಿಮೆಯನ್ನು ಸ್ಥಾಪಿಸಲು ಸ್ಥಳವನ್ನು ಆರಿಸಿಕೊಳ್ಳಲಾಗಿದೆ ಎಂದು ಮಂತ್ರಾಲಯ ಮಠದ ಮಠಾಧೀಶ ಶ್ರೀ ಸುಬುದೇಂದ್ರ ತೀರ್ಥ ಸ್ವಾಮಿಗಳು ತಿಳಿಸಿದ್ದರು.

ಪುಟ 2

## ಪ್ರಮುಖ ಸುದ್ದಿ

# ಅಯ್ಯಯ್ಯೋ ರಸ್ತೆ.....ಇದೆಂಥಾ ಅವ್ಯವಸ್ಥೆ

## ನಡೆದಾಡಲು ಆಗುತ್ತಿಲ್ಲ ಮಕ್ಕಳು,ಮುದುಕರು ಬೀಳುವುದು ತಪ್ಪುತ್ತಿಲ್ಲ!

» ನಾಗತಿಹಳ್ಳಿಮಂಜುನಾಥ್

ಹೊಸದುರ್ಗ: ಹೊಸದುರ್ಗ ಪಟ್ಟಣದ 23 ವಾರ್ಡುಗಳಲ್ಲಿ ಒಂದೊಂದು ಸಮಸ್ಯೆ ಎಂಬುದು ಇದ್ದೇ ಇರುತ್ತದೆ, ಆದರೆ 16 ನೇ ವಾರ್ಡು ಹೊರತು ಪಡಿಸಿ ಉಳಿದ ವಾರ್ಡುಗಳು ಸಮಸ್ಯೆಗಳನ್ನ ಹೇಗೋ ಬಗೆಹರಿಸಬಹುದು ಆದರೆ ಓಡಾಡಲು ಸರಿಯಾದ ರಸ್ತೆ ನಿರ್ಮಾಣವಾಗಿಲ್ಲ ಎಂದರೆ ಇದಕ್ಕಿಂತ ದೊಡ್ಡ ಸಮಸ್ಯೆ ಬೇಕೆ ಎಂಬುದು ಇಲ್ಲಿನ ನಾಗರೀಕರ ಪ್ರಶ್ನೆಯಾಗಿದೆ.

16 ನೇ ವಾರ್ಡಿನಲ್ಲಿ ಅಚ್ಚುಕಟ್ಟಾದ ರಸ್ತೆ ಇತ್ತು, ಓಡಾಡಲು ತಿರುಗಾಡಲು ವಾಹನಗಳ ಸಂಚಾರಿಸಲು ಯೋಗ್ಯವಾದ ರಸ್ತೆಗಳು ಇದ್ದವು, ಗೂಳಿಹಟ್ಟಿಶೇಖರ್ ಶಾಸಕರಾಗಿದ್ದ ಸಂಧರ್ಬದಲ್ಲಿ ಪಟ್ಟಣವನ್ನ ಅಭಿವೃದ್ಧಿ ಮಾಡುವ ಸಲುವಾಗಿ ನಗರೋತ್ತನ್ನ ಎಂಬ ಯೋಜನೆಯ ಹೆಸರಿನಲ್ಲಿ ಈ ಬಡಾವಣೆಯ ಕೆಲವು ಕಡೆ ನೆಟ್ಟಗಿದ್ದ ರಸ್ತೆಗಳನ್ನ ಕಿತ್ತು ನೂತನವಾಗಿ ರಸ್ತೆ ನಿರ್ಮಾಣ ಮಾಡಬೇಕೆಂಬ ಯೋಜನೆಗೆ ಕೈ ಹಾಕಿದ್ದರು.

ಪುಟ 2



> ಪಟ್ಟಣದ 16 ನೇ ವಾರ್ಡ್‌ನ ಕಲ್ಲೇಶ್ವರ ಬಡಾವಣೆಯಲ್ಲಿ ರಸ್ತೆ ನಿರ್ಮಿಸಲು ಎರಡಲಿಂದ ಮೂರು ತಿಂಗಳ ಹಿಂದೆಯೇ ರಸ್ತೆ ಅಗೆಯಲಾಗಿದೆ (ಕೆತ್ತಲಾಗಿದೆ) ದಿನ ನಿತ್ಯ ವಾಹನ ಸವಾರರು ಹಾಗೂ ಸಾರ್ವಜನಿಕರು ಓಡಾಟಕ್ಕೆ ತೊಂದರೆಯಾಗಿದೆ. ರಸ್ತೆ ನಿರ್ಮಿಸುವಂತೆ ಹಲವು ಬಾರಿ ಸಂಬಂಧ ಪಟ್ಟವರಿಗೆ ಮನವಿ ಮಾಡಿದರು ಯಾವುದೇ ಪ್ರಯೋಜನವಾಗಿಲ್ಲ.
>
> » ಚಿಕ್ಕಣ್ಣಚಾರ್, ನಿವಾಸಿ,ಹೊಸದುರ್ಗ








## ಫಾಸ್ಟ್ ನ್ಯೂಸ್

### 36 ಬೆಳೆಗಳ ವಿಮೆಗೆ ನೊಂದಣಿ ಆರಂಭ

» **ಬೆಂಗಳೂರು**

ಬೆಳೆ ವಿಮೆಗೆ ನೋಂದಣಿ ಆರಂಭವಾಗಿದೆ. 36 ಬೆಳೆಗಳಿಗೆ ವಿಮೆ ಕಲ್ಪಿಸಲಾಗಿದೆ. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ ಅಡಿ ಮುಂಗಾರು ಹಂಗಾಮಿನಲ್ಲಿ ರಾಜ್ಯದಲ್ಲಿ 36 ಆಹಾರ, ಎಣ್ಣೆಕಾಳು, ವಾರ್ಷಿಕ ವಾಣಿಜ್ಯ ಮತ್ತು ತೋಟಗಾರಿಕೆ ಬೆಳೆಗಳನ್ನು ವಿಮೆಗೆ ಒಳಪಡಿಸಲಾಗಿದೆ. ತಾಲೂಕಿನ ಮುಖ್ಯ ಬೆಳೆಗಳನ್ನು ಗ್ರಾಮ ಪಂಚಾಯಿತಿ ಮಟ್ಟಕ್ಕೆ, ಉಳಿದ ಬೆಳೆಗಳನ್ನು ಹೋಬಳಿ ಮಟ್ಟಕ್ಕೆ ಅಧಿಸೂಚಿಸಲಾಗಿದ್ದು, ಶೇಕಡ 2ರಿಂದ 5ರಷ್ಟು ಪ್ರೀಮಿಯಂ ನಿಗದಿ ಮಾಡಲಾಗಿದೆ. ಜಂಟಿ ಖಾತೆದಾರರು ಫ್ರೂಟ್ಸ್ ತಂತ್ರಾಂಶದಲ್ಲಿ ದಾಖಲಾದ ವಿಸ್ತೀರ್ಣಕ್ಕೆ ಅನುಸಾರ ಬೆಳೆ ವಿಮೆ ನೋಂದಣಿ ಮಾಡಲು ಅವಕಾಶ ಕಲ್ಪಿಸಲಾಗಿದೆ. ಸಂಬಂಧಿಸಿದ ಸೇರ್ಪಡೆ ಅಥವಾ ಬದಲಾವಣೆಗೆ ಹತ್ತಿರದ ರೈತ ಸಂಪರ್ಕ ಕೇಂದ್ರ ಅಥವಾ ತೋಟಗಾರಿಕೆ ಇಲಾಖೆಗಳಿಗೆ ಭೇಟಿ ನೀಡಬಹುದು. ವಿವಿಧ ಬೆಳೆಗಳಿಗೆ ನೋಂದಣಿಗೆ ಬೇರೆ ಬೇರೆ ಕೊನೆಯ ದಿನಾಂಕ ನಿಗದಿ ಮಾಡಲಾಗಿದ್ದು, ಕೆಲವು ಬೆಳೆಗಳಿಗೆ ಜುಲೈ 31, ಮತ್ತೆ ಕೆಲವು ಬೆಳೆಗಳಿಗೆ ಅಗಸ್ಟ್ 16 ಕೊನೆಯ ದಿನವಾಗಿದೆ.

### ಕುಕ್ಕೆ ಸುಬ್ರಹ್ಮಣ್ಯದ ಕುಮಾರಧಾರ ಸ್ನಾನಘಟ್ಟ ಮುಳುಗಡೆ

» **ಮಂಗಳೂರು**

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಳೆ ಮುಂದುವರಿದಿದ್ದು, ಶನಿವಾರ ರಾತ್ರಿಯಿಂದಲೂ ಗಾಳಿ ಮಳೆಯಾಗುತ್ತಿದೆ. ಹೀಗಾಗಿ ಅಲ್ಲಲ್ಲಿ ಸಾಕಷ್ಟು ಅವಾಂತರ ಸೃಷ್ಟಿಯಾಗಿದ್ದು ಸಾಕಷ್ಟು ಹಾನಿಯೂ ಆಗಿದೆ. ಪಶ್ಚಿಮ ಘಟ್ಟ ಪ್ರದೇಶದಲ್ಲಿ ನಿರಂತರ ಮಳೆಯಾಗುತ್ತಿರುವುದರಿಂದ ಜಿಲ್ಲೆಯ ಕುಕ್ಕೆ ಸುಬ್ರಹ್ಮಣ್ಯದ ಕುಮಾರಧಾರ ಸ್ನಾನಘಟ್ಟ ಮುಳುಗಡೆಯಾಗಿದೆ. ಘಟ್ಟ ಪ್ರದೇಶದಿಂದ ಭಾರೀ ಪ್ರಮಾಣದಲ್ಲಿ ನೀರು ಹರಿದುಬರುತ್ತಿದ್ದು, ಕುಮಾರಧಾರಾ ನದಿಯಲ್ಲಿ ನೀರಿನ ಮಟ್ಟ ಹೆಚ್ಚಳವಾಗುತ್ತಿದೆ. ನದಿ ಬದಿಗೆ ಹೋಗದಂತೆ ದೇವಾಲಯದ ಭಕ್ತರಿಗೆ ಸೂಚನೆ ನೀಡಲಾಗುತ್ತಿದೆ. ಅಲ್ಲದೆ ಪೊಲೀಸರು, ಗೃಹರಕ್ಷಕ ದಳದಿಂದ ಸ್ನಾನ ಘಟ್ಟ ಬಳಿ ಕಾವಲು ಕಾಯುತ್ತಿದ್ದಾರೆ. ಕುಮಾರಧಾರ ನೀರು ಹೆಚ್ಚಳವಾಗಿ ಸುಬ್ರಹ್ಮಣ್ಯ-ಮಂಜೇಶ್ವರ ಹೆದ್ದಾರಿ ಬಂದ್ ಆಗಿದೆ.

### ಅಯ್ಯಯ್ಯೋ ರಸ್ತೆ..... ಇದೆಂಥಾ ಅವ್ಯವಸ್ಥೆ

» **ಮೊದಲ ಪುಟದಿಂದ**

ಇರುವ ರಸ್ತೆಯನ್ನ ಕಿತ್ತು ಹಾಕಿದ ಮೇಲೆ ಇಲ್ಲಿನ ಜನರು ನೂತನ ರಸ್ತೆ ಈಗ ಆಗುತ್ತೆ ಆಗ ಆಗುತ್ತೆ ಎಂದು ಭಕಪಕ್ಷಿಯಂತೆ ಕಾಯುತ್ತಲೇ ಇದ್ದಾರೆ ಆದರೆ ಇವರ ಬಯಕೆಯ ಪೂಜೆ ಇಂದಿಗೂ ಫಲಿಸುತ್ತಿಲ್ಲ ಎಂಬುದು ವಿಷಾದಕರ, ಬಿಜೆಪಿ ಸರ್ಕಾರ ಇದ್ದಾಗ ರಸ್ತೆಗಳನ್ನ ಕಿತ್ತು ಮತ್ತೆ ನೂತನವಾಗಿ ರಸ್ತೆಗಳನ್ನು ನಿರ್ಮಾಣ ಮಾಡಿ ಸರಿಡಿಸುತ್ತೇವೆ ಎಂದರು. ಅದರಂತೆ ನೆಟ್ಟಗಿದ್ದ ರಸ್ತೆಗಳನ್ನ ಕಿತ್ತಿದ್ದಾರೆ ಈಗ ಕಾಂಗ್ರೆಸ್ ಸರ್ಕಾರ ಬಂದಿದೆ, ಈ ರಸ್ತೆ ಸರಿಯಾಗಬೇಕಾದರೆ ಯಾರನ್ನ ಕೇಳಬೇಕು ಹೇಗೆ ಕೇಳಬೇಕು ಎಂಬುದೇ ಇಲ್ಲಿನ ಸಾರ್ವಜನಿಕ್ಕರಿಗೆ ಒಂದು ದೊಡ್ಡ ಸಲಾಲಾಗಿದೆಯಂತೆ ಈ ಭಾಗದ ಪುರಸಭಾ ಸದಸ್ಯರನ್ನ ಕೇಳಿದರೆ ಈಗ ಕಾಂಗ್ರೆಸ್ ಸರ್ಕಾರ ಬಂದಿದೆ ಹಾಗಾಗಿ ಕೆಲಸ ಸ್ಥಗಿತವಾಗಿದೆ ಎನ್ನುತ್ತಾರಂತೆ ಈ ವಾರ್ಡಿನ ಪುರಸಭಾ ಸದಸ್ಯರು ಈಗಾಗಿ 16 ನೇ ವಾರ್ಡಿನ ಸಮಸ್ಯೆಗೆ ಈ ವಾರ್ಡಿನ ಸದಸ್ಯರ ವಿರುದ್ಧ ಪುರಸಭೆಯ ವಿರುದ್ಧ ಹಾಗೂ ಜನಪ್ರತಿನಿಧಿಗಳ ವಿರುದ್ಧ ಇಲ್ಲಿನ ನಿವಾಸಿಗಳು ರೋಸೆದ್ದು ಹೋಗಿದ್ದಾರೆ.

### ಮಂತ್ರಾಲಯದಲ್ಲಿ 108 ಅಡಿ ಎತ್ತರದ ಶ್ರೀರಾಮ ಪ್ರತಿಮೆ ನಿರ್ಮಾಣಕ್ಕೆ ಅಡಿಗಲ್ಲು



» **ಮೊದಲ ಪುಟದಿಂದ**

**ಏಕಶಿಲಾ ಪ್ರತಿಮೆ ನಿರ್ಮಾಣ:** ಇನ್ನು ರಾಘವೇಂದ್ರ ಮಠವು ಈ ಉದ್ದೇಶಕ್ಕಾಗಿ ಕಳೆದ ಎಳೆಂಟು ತಿಂಗಳ ಹಿಂದೆ ಶ್ರೀ ಸತ್ಯಸಾಯಿ ಜಿಲ್ಲೆಯ ರೊಳ್ಳ ಮಂಡಲದ ಕೊಡಗರ್ಲಗುಟ್ಟ ಪ್ರದೇಶದಿಂದ ಒಂದೇ ಕಲ್ಲನ್ನು ಖರೀದಿಸಿ ವಿಶೇಷ ವಾಹನದ ಮೂಲಕ ಪ್ರತಿಮೆ ಸ್ಥಾಪಿಸುವ ಸ್ಥಳಕ್ಕೆ ಶಿಲೆಯನ್ನು ಸ್ಥಳಾಂತರಿಸಿದೆ. ಡಿಜಿಟಲ್ ತಂತ್ರಜ್ಞಾನ ಬಳಸಿ ಪ್ರತಿಮೆ ಕೆತ್ತುವ ಕೆಲಸವನ್ನು ಕರಾವಳಿ ಭಾಗದ ತಜ್ಞರ ತಂಡಕ್ಕೆ ನೀಡಲಾಯಿತು. ಈ ತಂತ್ರಜ್ಞಾನವನ್ನು ಬಳಸಿಕೊಂಡು ಸಂಸ್ಥೆಯು 9 ಅಡಿ ಪ್ರತಿಮೆಯನ್ನು ಸಿದ್ಧಪಡಿಸಿತ್ತು. ಅದೇ ವಿನ್ಯಾಸವನ್ನು 108 ಅಡಿ ಪ್ರತಿಮೆಯನ್ನು ಕೆತ್ತಲು ಮಠಾಧೀಶರು ಅನುಮೋದಿಸಿದ್ದಾರೆ.

# ಗೋವಿಂದಪ್ಪ ನೇತೃತ್ವದಲ್ಲಿ ಭದ್ರಾ ಮೇಲ್ದಂಡೆ ಕಾಮಗಾರಿ ಪೂರ್ಣ: ಸಚಿವ ಡಿ.ಸುಧಾಕರ್

» **ಹೊಸದುರ್ಗ**

ಶಾಸಕ ಬಿ.ಜಿ.ಗೋವಿಂದಪ್ಪನವರಿಗೆ 4 ದಶಕಗಳ ರಾಜಕೀಯ ಅನುಭವವಿದ್ದು, ಹೊಸದುರ್ಗ ಕ್ಷೇತ್ರಕ್ಕೆ ಶಾಸಕರಾಗಿದ್ದಾಗ ಸಾಕಷ್ಟು ಅನುದಾನ ತಂದಿದ್ದಾರೆ. ಜಿಲ್ಲೆಯ ಶಾಸಕರು ಅವರ ನೇತೃತ್ವದಲ್ಲಿ ನೆನೆಗುದಿಗೆ ಬಿದ್ದಿರುವ ಭದ್ರಾ ಮೇಲ್ದಂಡೆ ಯೋಜನೆ ಕಾಮಗಾರಿಯನ್ನು ಶೀಘ್ರವೇ ಪೂರ್ಣಗೊಳಿಸುತ್ತೇವೆ ಎಂದು ಯೋಜನೆ ಮತ್ತು ಸಾಂಖ್ಯಿಕ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್ ಹೇಳಿದರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಭಾನುವಾರ ಹೊಸದುರ್ಗ ತಾಲೂಕು, ಕುರುಬರ ಸಂಘ ಹಾಗೂ ಕನಕ ನೌಕರರ ಸಂಘದ ವತಿಯಿಂದ ಆಯೋಜಿಸಿದ್ದ 'ಪ್ರತಿಭಾ ಪುರಸ್ಕಾರ' ಹಾಗೂ ಶಾಸಕರಿಗೆ ಅಭಿನಂದನಾ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಭದ್ರಾ ಮೇಲ್ದಂಡೆ ಯೋಜನೆ ಬಗ್ಗೆ ಜಲಸಂಪನ್ಮೂಲ ಸಚಿವರು ಆಗಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿ ಮಾಡಿ ಸಮಾಲೋಚನೆ ನಡೆಸಲಾಗಿದೆ. ಈಗಾಗಲೇ ಜಿಲ್ಲೆಯ ಎಲ್ಲಾ ಶಾಸಕರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ



ನಡೆಸಿದ್ದೇವೆ. ಗೋವಿಂದಪ್ಪನವರದು ಸರಳ ವ್ಯಕ್ತಿತ್ವ. ಪರಿಶುದ್ಧವಾದ ರಾಜಕಾರಣದಲ್ಲಿ ತೊಡಗಿಸಿಕೊಂಡಿದ್ದಾರೆ. ರಾಜ್ಯದಲ್ಲಿ ಕ್ರಿಯಾಶೀಲ ಶಾಸಕರಲ್ಲಿ ಇವರು ಕೂಡ ಒಬ್ಬರು ಎಂದು ಅಭಿಮಾನದ ಮಾತುಗಳನ್ನಾಡಿದರು.

ಅಭಿನಂದನೆ ಸ್ವೀಕರಿಸಿ ಶಾಸಕ ಬಿ.ಜಿ.ಗೋವಿಂದಪ್ಪ ಮಾತನಾಡಿ, ತಾಲ್ಲೂಕು ಕುರುಬ ಸಮಾಜ ಎಲ್ಲಾ ಸಮಾಜದವರನ್ನು ಬರಮಾಡಿಕೊಂಡು, ಎಲ್ಲರಿಗೂ ಅಭಿನಂದಿಸಿರುವುದು ಸಂತಸದಾಯಕವಾಗಿದೆ. 1952ರಲ್ಲಿ ಇಂದಿನವರೆಗೂ ತಾಲ್ಲೂಕಿನಲ್ಲಿ ಉತ್ತಮವಾದ ರಾಜಕಾರಣವಿದೆ. ತಾಲ್ಲೂಕಿನ ಜನತೆ ಯಾವುದೇ ಜಾತೀಯತೆಯಿಲ್ಲದೇ, ಅರ್ಹರನ್ನೇ ಆಯ್ಕೆ ಮಾಡಿದ್ದಾರೆ. ಕೇವಲ ಒಂದು ಜಾತಿಯ ಮತಗಳಿಂದ ಚುನಾವಣೆ ಗೆಲ್ಲಲು ಸಾಧ್ಯವಿಲ್ಲ. ಎಲ್ಲಾ ಜಾತಿಯ ಜನರ ಆರ್ಶೀವಾದವಿರಬೇಕು. ಈ ನಿಟ್ಟಿನಲ್ಲಿ ಎಲ್ಲರ ಆರ್ಶೀವಾದ, ಪರಿಶುದ್ಧವಾದ ರಾಜಕಾರಣದ ಮೂಲಕ ಮತ್ತೊಮ್ಮೆ ಶಾಸಕನಾಗಿದ್ದೇನೆ. ಪಕ್ಷಕ್ಕೂ ನಿಷ್ಠೆಯಿಂದ ದುಡಿದಿದ್ದೇನೆ. ನನ್ನ ಜೀವನದ ಕೊನೆ ಉಸಿರಿರುವವರೆಗೂ ಜನಸೇವೆಗೆ ನನ್ನ ಜೀವನವನ್ನು ಮೀಸಲಾಗಿರುತ್ತೇನೆ ಎಂದರು.

ಈ ವೇಳೆ ಎಸ್ಸೆಸ್ಸೆಲ್ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅಧಿಕ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನಡೆಸಲಾಯಿತು.

ಹೊಸದುರ್ಗ ಕನಕ ಧಾಮದ ಈಶ್ವರಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ತಾಲೂಕು ಕುರುಬರ ಸಂಘದ ಅಧ್ಯಕ್ಷ ಮಂಜುನಾಥ್ ಅಧ್ಯಕ್ಷತೆ ವಹಿಸಿದ್ದರು. ಕೆಪಿಸಿಸಿ ಕಾರ್ಯಾಧ್ಯಕ್ಷ ಮತ್ತು ಮಾಜಿ ಸಂಸದ ಬಿ.ಎನ್. ಚಂದ್ರಪ್ಪ, ಚಳ್ಳಕೆರೆ ಶಾಸಕ ಟಿ.ರಘುಮೂರ್ತಿ, ತರೀಕೆರೆ ಶಾಸಕ ಶ್ರೀನಿವಾಸ್, ಮಾಜಿ ಸಚಿವ ಹೆಚ್.ಆಂಜನೇಯ ಮತ್ತು ಕನಕ ನೌಕರರ ಸಂಘದ ತಾಲೂಕು ಅಧ್ಯಕ್ಷ ಶಾಂತಮೂರ್ತಿ ಸೇರಿದಂತೆ ಹಲವರಿದ್ದರು.

## ವಿಶ್ವಭಾರತಿ ಶಾಲೆಯಲ್ಲಿ ಮಕ್ಕಳ ಸಂಸತ್ ಚುನಾವಣೆ

### ವಿದ್ಯಾರ್ಥಿಗಳಿಗೆ ಶಿಕ್ಷಣದ ಜೊತೆಗೆ ಪ್ರಜಾಪ್ರಭುತ್ವದ ಬಗ್ಗೆ ಜಾಗೃತಿ: ವೀರಭದ್ರಸ್ವಾಮಿ

» **ಚಳ್ಳಕೆರೆ**

ಶಾಲಾ ಹಂತದಲ್ಲೇ ವಿದ್ಯಾರ್ಥಿಗಳಿಗೆ ರಾಷ್ಟ್ರದ ಸಂವಿಧಾನ ರೂಪಿಸಿದ ಪ್ರಜಾಪ್ರಭುತ್ವದ ಕಾರ್ಯ ವ್ಯಾಪ್ತಿಯ ಬಗ್ಗೆ ಜಾಗೃತಿ ಮೂಡಿಸಲು ಶಾಲೆಯಲ್ಲಿ ಮಕ್ಕಳ ಸಂಸತ್ ಮೂಲಕ ಚುನಾಯಿತ ಪ್ರತಿನಿಧಿಯನ್ನು ಆಯ್ಕೆ ಮಾಡಿ ಶಾಲಾ ಮಕ್ಕಳಿಗೂ ಸಹ ಪ್ರಜಾಪ್ರಭುತ್ವದ ರೂಪುರೇಷೆಗಳನ್ನು ಅರ್ಥೈಸುವ ಕಾರ್ಯ ಯಶಸ್ವಿಯಾಗಿ ನಡೆಯಿತು ಎಂದು ವಿಶ್ವಭಾರತಿ ಪ್ರೌಢಶಾಲೆಯ ಮಕ್ಕಳ ಸಂಸತ್ ಚುನಾವಣಾಧಿಕಾರಿ ಮುಖ್ಯ ಚುನಾವಣಾಧಿಕಾರಿ, ಮುಖ್ಯೋಪಾಧ್ಯಾಯ ಜಿ.ಟಿ.ವೀರಭದ್ರಸ್ವಾಮಿ ತಿಳಿಸಿದರು.

ಅವರು, ಶಾಲೆಯಲ್ಲಿ ನಡೆದ ಮಕ್ಕಳ ಸಂಸತ್ ಚುನಾವಣಾ ಆಯ್ಕೆ ಪ್ರಕ್ರಿಯೆಯಲ್ಲಿ ಪಾಲ್ಗೊಂಡು ಮಾತನಾಡಿದರು. ಶಾಲೆಯ ಮಕ್ಕಳ ಸಂಸತ್ ಚುನಾವಣೆಯಲ್ಲಿ ಒಟ್ಟು 140 ಅರ್ಹತೆ ಪಡೆದ ಮತದಾರರಿದ್ದು, ಆ ಪೈಕಿ 139 ವಿದ್ಯಾರ್ಥಿಗಳು ಮತಚಲಾಯಿಸಿದರು. ಚುನಾವಣೆ ಪ್ರಕ್ರಿಯೆಯಂತೆ ಒಟ್ಟು 8 ಅಭ್ಯರ್ಥಿಗಳು ಕಣದಲ್ಲಿದ್ದು ಬ್ಯಾಲೇಟ್ ಪೇಪರ್ ಸಿದ್ದಪಡಿಸಿ ಅದನ್ನು ಮತಪೆಟ್ಟಿಗೆಗೆ ಹಾಕುವ ಮೂಲಕ ಚುನಾಯಿತ ಪ್ರತಿನಿಧಿಯನ್ನು ಆಯ್ಕೆ ಮಾಡಲಾಯಿತು. ಅಂತಿಮವಾಗಿ 10ನೇ ತರಗತಿ ವಿದ್ಯಾರ್ಥಿ ನಂದಕಿಶೋರ್



ಹೆಚ್ಚು ಮತಗಳನ್ನು ಪಡೆದು ಆಯ್ಕೆಯಾದರು. ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದ ಎಚ್. ಎಂ.ಸೂರ್ಯಪ್ರಭ ಮಾತನಾಡಿ, ಮಕ್ಕಳ ಸಂಸತ್ ಚುನಾವಣೆ ಶಾಲಾ ಆವರಣದಲ್ಲೇ ತುಂಬಾ ಅಚ್ಚುಕಟ್ಟಾಗಿ ನಡೆಯಿತು. ಮಕ್ಕಳಿಗೆ ಮತದಾನದ ಮುನ್ನವೇ ಮತದಾನ ಮಾಡುವ ಬಗ್ಗೆ ಮಾಹಿತಿ ನೀಡಲಾಯಿತು. ಚುನಾವಣೆಗೂ ಮುನ್ನ ಗುರುತಿನ ಚೀಟಿ ನೀಡಿ ಪ್ರತಿಯೊಬ್ಬ ವಿದ್ಯಾರ್ಥಿಯೂ ಮತಗಟ್ಟೆಯ ಮುಂದೆ ಸಾಲಾಗಿ ನಿಂತು ಮತಚಲಾಯಿಸಿದರು. ಮತದಾನ ಮಾಡುವ ಸಂದರ್ಭದಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಮುಖದಲ್ಲಿ ಚುನಾವಣೆ ಪ್ರಕ್ರಿಯೆಯ ಬಗ್ಗೆ ಉತ್ಸಾಹ ಕಾಣುತ್ತಿತ್ತು. ಚುನಾವಣೆ ನಡೆದ ಮತ ಏಣಿಕೆ ಕಾರ್ಯ ನಡೆದ ನಂತರ ವಿಜೇತ ಅಭ್ಯರ್ಥಿ ನಂದಕಿಶೋರ್‌ರವರನ್ನು ಸೋತ ಅಭ್ಯರ್ಥಿಗಳು ಹಾಗೂ ಶಿಕ್ಷಕರ ಸಮೂಹ ಅಭಿನಂದಿಸಿತು.

ಸಹಾಯಕ ಚುನಾವಣಾಧಿಕಾರಿಯಾಗಿ ಚಿದಾನಂದ, ಅರ್.ಗಿರೀಶ್, ಚನ್ನಬಸಣ್ಣ, ರಂಗಪ್ಪ ಮುಂತಾದವರು ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಿದ್ದರು.

## ಪ್ರಧಾನ ಮಂತ್ರಿ ಪಸಲು ಭೀಮಾ ಯೋಜನೆಯ ಪ್ರಚಾರಕ್ಕೆ ಚಾಲನೆ



» **ಮೊಳಕಾಲ್ಮುರು**

ಪ್ರಕೃತಿಯ ವಿಕೋಪಗಳಿಂದ ರೈತ ಸಮುದಾಯ ಅತಿವೃಷ್ಟಿ ಮತ್ತು ಅನಾ ವೃಷ್ಟಿಗಳಿಗೆ ಬಲಿಯಾಗಿ ಬೆಳೆನಷ್ಟ ಅನುಭವಿಸಿದಾಗ ಅಂತಹ ಸಂಕಷ್ಟದ ಪರಿಹಾರವಾಗಿ ತಮ್ಮ ಬೆಳೆಗಳಿಗೆ ಕರ್ನಾಟಕ ರೈತ ಪ್ರಧಾನ ಮಂತ್ರಿ ಪಸಲು ಬೀಮಾ ಯೋಜನೆಯ ಸೌಲಭ್ಯವನ್ನು ಸದುಪಯೋಗ ಪಡಿಸಿಕೊಳ್ಳಿ ಎಂದು ಕೃಷಿ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ : ಉಮೇಶ್ ತಿಳಿಸಿದರು. ಪಟ್ಟಣದ ಕೃಷಿ ಇಲಾಖೆ ಆವರಣದಲ್ಲಿ ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆಯ ಅರಿವು ಮೂಡಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಸರ್ಕಾರದ ಮಹದಾಸೆಯ ಕೃಷಿ ಇಲಾಖೆಯ ಕಾರ್ಯಕ್ರಮವಾದ ಕರ್ನಾಟಕ ರೈತ ಪ್ರಧಾನ ಮಂತ್ರಿ ಪಸಲು ಬೀಮಾ ಯೋಜನೆಯು ರೈತ ಸಮುದಾಯದ ಸಂಕಷ್ಟದ ಪರಿಹಾರದ ಮಹತ್ವ ಪೂರ್ಣವಾದ ಕಾರ್ಯಕ್ರಮ ವಾಗಿದ್ದು ರೈತ ಸಮುದಾಯ ನಿಗದಿತ ದಿನಾಂಕದೊಳಗೆ ತಮ್ಮ ಬೆಳೆಗಳಿಗೆ ವಿಮೆ ಮಾಡಿಸಿ ಸೂಕ್ತ ಪರಿಹಾರ ಪಡಿಯಬೇಕಾಗಿ ಮನವಿ ಮಾಡಿದರುರೈತ ಸಮುದಾಯದ ವಿಮೆ ಸೌಲಭ್ಯ ಸದುಪಯೋಗಕ್ಕಾಗಿ ಹರಿವು ಮೂಡಿಸುವ ಸಲುವಾಗಿ ಪ್ರತಿ ಗ್ರಾಮಗಳಲ್ಲಿ ತಮಟೆ ಬಾರಿಸುವ ಮೂಲಕ ಪ್ರಚಾರ ಪಡಿಸಲಾಗಿದ್ದು ಹೆಚ್ಚಿನ ಪ್ರಚಾರಕ್ಕಾಗಿ ಆಟೋವಾಹನದ ಧ್ವನಿ ವರ್ಧಕದ ಮೂಲಕ ತಾಲ್ಲೂಕಿನ ಪ್ರತಿ ಗ್ರಾಮಗಳಲ್ಲಿ ಬೆಳೆ ವಿಮೆಯ ಸಾಧಕ ಬಾದಕಗಳ ಬಗ್ಗೆ ಮತ್ತು ನಿಗದಿತ ದಿನಾಂಕದ ಒಳಗೆ ವಿಮೆ ಮಾಡಿಸುವಂತೆ ಪ್ರಚಾರ ಮಾಡಲಾಗುವುದಾಗಿ ತಿಳಿಸಿದರು.ಕಾರ್ಯಕ್ರಮದಲ್ಲಿ ಕೃಷಿಕ ಸಮಾಜದ ಅಧ್ಯಕ್ಷರಾದ ಹನ್ವಿ ಹನುಮಂತರೆಡ್ಡಿ , ಉಪಾಧ್ಯಕ್ಷರಾದ ಭಕ್ತ ಪ್ರಹಲ್ಲಾದಸದ್ಯಸರಾದ ಮೋಹನ ರೆಡ್ಡಿ ಕೃಷ್ಣಮೂರ್ತಿ ಕೃಷಿ ಇಲಾಖೆ ತಾಂತ್ರಿಕ ವ್ಯೆವಸ್ಥಾಪಕರಾದ(ಆತ್ಮಯೋಜನೆ) ನಿರಂಜನ ಮೂರ್ತಿ ಕನಕ ಶಿವಮೂರ್ತಿ ಮುಂತಾದ ರೈತ ಮುಖಂಡರು ಉಪಸ್ಥಿತರಿದ್ದರು

## ರಕ್ತದಾನದಿಂದ ಅಮೂಲ್ಯ ಜೀವ ಉಳಿಸಿದ ಪುಣ್ಯ

» **ಹೊಸದುರ್ಗ**

ದಾನಗಳಲ್ಲಿ ಸಾಕಷ್ಟು ದಾನಗಳಿವೆ ಅನ್ನದಾನ,ನೇತ್ರದಾನ ಈಗೆ ಹತ್ತು ಹಲವಾರು ದಾನಗಳನ್ನು ಮಾಡುವುದರ ಜೋತೆಗೆ ಮನುಷ್ಯ ಜೀವನವನ್ನ ಸಾರ್ಥಕತೆ ಪಡಿಸಿಕೊಳ್ಳಲು ಮುಂದಾಗುತ್ತಾನೆ, ದಾನಗಳಲ್ಲಿ ರಕ್ತದಾನವೂ ಕೂಡ ಅತ್ಯಂತ ಶ್ರೇಷ್ಠವಾದ ದಾನವಾಗಿದ್ದು ರಕ್ತದಾನದಿಂದ ಸಂಕಷ್ಟದಲ್ಲಿರುವ ಅಮೂಲ್ಯ ಜೀವಗಳನ್ನು ಉಳಿಸುವ ಪುಣ್ಯ ಬರುತ್ತದೆ ಎಂದು ಹೊಸದುರ್ಗ ರೋಟರಿ ಸಂಸ್ಥೆ ಅಧ್ಯಕ್ಷ ಜಯರಾಂಬಾಬು ಅಭಿಪ್ರಾಯಿಸಿದರು.



ತಾಲೂಕಿನ ಮತ್ತೋಡು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ರೋಟರಿ ಸಂಸ್ಥೆ ಹೊಸದುರ್ಗ,ಮಿಲ್ಲೆಟ್ಸ್ ಮತ್ತು ರೋಟರಿ ಬ್ಲಡ್ ಬ್ಯಾಂಕ್ ಶಿವಮೊಗ್ಗ, ಇವರ ಸಂಯುಕ್ತಾಶ್ರಯದಲ್ಲಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು. ಈ ಸಂಧರ್ಬದಲ್ಲಿ ಜಿಲ್ಲಾ ಗೌರ್ನರ್ ಒಮ್ಮಿನಿಸತೀಶ್, ಮತ್ತೋಡು ವ್ಯಾಪ್ತಿಯ ಯೋಜನಾ ವ್ಯವಸ್ಥಾಪಕ ಪ್ರಸನ್ನರಾಮೇಗೌಡ, ಸತೀಶ್ ಟಿ.ಎಂ. ಸುನೀಲ್‌ಕುಮಾರ್. ಪಿ, ಗುರುರಾಜ್‌ದೇಶಪಾಂಡೆ ಹಾಜರಿದ್ದರು.


**ಪ್ರಮುಖ ಸುದ್ದಿ**

# ಪೊಲೀಸ್ ಸಿಬ್ಬಂದಿಯ ಮೂಲಭೂತ ಸೌಕರ್ಯ ಒದಗಿಸಿ ಗಡಿ ಭಾಗದ ತಾಲ್ಲೂಕಿನ ಜನರ ರಕ್ಷಣೆಗೆ ಸಹಕರಿಸಿ

» **ಮೊಳಕಾಲ್ಮುರು ಸುದ್ದಿ**

ತಾಲ್ಲೂಕಿನಲ್ಲಿ ನಡೆಯುವ ಕೃತ್ಯಗಳಿಗೆ ಮತ್ತು ಅಪರಾಧ ಪ್ರಕರಣಗಳ ತಡೆಯುವ ರಕ್ಷಣ ಸಿಬ್ಬಂದಿಗೆ ಮೂಲ ಸೌಕರ್ಯ ಕಲ್ಪಿಸಿ ಗಡಿಭಾಗದ ತಾಲ್ಲೂಕಿನ ಜನರ ರಕ್ಷಣೆಗೆ ಸಹಕರಿಸಿ ಮತ್ತು ಬಿ.ಜಿ.ಕೆರೆ ಗ್ರಾಮದಲ್ಲಿರುವ ಪೋಲೀಸ್ ಉಪ ಠಾಣೆಯನ್ನು ಮೇಲ್ದರ್ಜೆ ಗೇರಿಸಿ ಎಂದು ದಲಿತ ಸಂಘರ್ಷ ಸಮಿತಿ ರಾಜ್ಯ ವಿಭಾಗೀಯ ಸಂಚಾಲಕರಾದ ಬಿ ಟಿ ನಾಗಭೂಷಣ ತಿಳಿಸಿದರು.

ಪಟ್ಟಣದ ಪೊಲೀಸ್ ಠಾಣೆಯ ಆವರಣದಲ್ಲಿ ರೈತ ಸಂಘ ಹಾಗೂ ದಲಿತ ಸಂಘರ್ಷ ಸಮಿತಿಯ ವತಿಯಿಂದ ಸಿಪಿಐ ಸತೀಶ್ ರವರಿಗೆ ಮನವಿ ಪತ್ರನೀಡಿ ಮಾತನಾಡಿದರು. ಗಡಿ ಭಾಗದ ತಾಲ್ಲೂಕಿನಲ್ಲಿ ಅನೇಕ ಅಪರಾಧ ಕೃತ್ಯಗಳು ನಡೆಯುತ್ತಿದ್ದು, ಅಂತಹ ಕೃತ್ಯ ಗಳನ್ನು ತಡೆಗಟ್ಟುವಲ್ಲಿ ಆರಕ್ಷಕ ಠಾಣೆಯ ಅಧಿಕಾರಿಗಳು ಮತ್ತು ಪೊಲೀಸ್ ಸಿಬ್ಬಂದಿಯ ಪಾತ್ರ ಪ್ರಮುಖವಾಗಿದೆ.



ಇಂತಹ ಸಿಬ್ಬಂದಿಗೆ ಮೂಲ ಸೌಕರ್ಯ ಕಲ್ಪಿಸಿಕೊಡಬೇಕು. ಬಿಜಿಕೆರೆಯಲ್ಲಿರುವ ಉಪ ನಿರೀಕ್ಷಕರ ಠಾಣೆಗೆ ಬಡ್ತಿ ನೀಡಿ, ಠಾಣೆಗೆ ಹೊಸ ಕಟ್ಟಡ, ಸಿಬ್ಬಂದಿಗೆ ಗೃಹಗಳನ್ನು ನಿರ್ಮಾಣ ಮಾಡಬೇಕು ಹಾಗೂ ತಾಲ್ಲೂಕಿನ ಎಲ್ಲಾ ಪೊಲೀಸ್ ಠಾಣೆಗಳಿಗೆ ಹೊಸ ಕಟ್ಟಡ, ಸಿಬ್ಬಂದಿಗೆ ಗೃಹಗಳು, ವಾಹನಗಳನ್ನು ಕೊಟ್ಟು ಇಲಾಖೆಗೆ ಹೊಸ ಸ್ಪರ್ಷ ಕೊಡಬೇಕು. ತಾಲ್ಲೂಕಿನ ಗಡಿಭಾಗ ಅಂಧ್ರಪ್ರದೇಶಕ್ಕೆ ಹೊಂದಿಕೊಂಡಿದ್ದು, ಕಳ್ಳಕಾಕರನ್ನು ಮಟ್ಟಹಾಕಲು ಸಿಬ್ಬಂದಿಗೆ ಅತ್ಯಾಧುನಿಕ ತಂತ್ರ ಜ್ಞಾನ ಹೊಂದಿದ ಆಯುಧಗಳನ್ನು ಕೊಡಬೇಕು ಎಂದರು..

ಕೆಲವು ವರ್ಷಗಳ ಹಿಂದೆ ರಾಂಪುರದಲ್ಲಿ ಆಟೋದಲ್ಲಿ ಪ್ರಮಾಣ ಮಾಡುವಾಗ ಅಪಘಾತದಲ್ಲಿ 11 ಜನ ಕೂಲಿ ಕಾರ್ಮಿಕರು ಮೃತಪಟ್ಟಿದ್ದರು. ರಾಂಪುರಕ್ಕೆ ಆಟೋದಲ್ಲಿ ಪ್ರಯಾಣ ಮಾಡುವಾಗ ಅಪಘಾತದಲ್ಲಿ ರೈತನು ಮೃತಪಟ್ಟಿದ್ದನು. ತಾಲ್ಲೂಕಿನ ಅನೇಕ ಹಳ್ಳಿಗಳ ಜನರು ಆಟೋಗಳನ್ನೇ ನಂಬಿಕೊಂಡು ಪ್ರಯಾಣ ಮಾಡುತ್ತಾರೆ. ಇಂತಹ ಅನೇಕ ಅಪಘಾತಗಳು ಆಟೋ ಮಾಲೀಕ ಹಾಗೂ ಚಾಲಕರಿಂದ ತಾಲ್ಲೂಕಿನಾದ್ಯಾಂತ ನಡೆದು ರೈತರು, ಕೂಲಿ ಕಾರ್ಮಿಕರು , ವೃದ್ಧರು, ಸಾರ್ವಜನಿಕರು, ಸಾಯುತ್ತಿದ್ದಾರೆ. ಇವರಿಗೆ ಅಪಘಾತ ವಿಮೆ ಬರುವುದಿಲ್ಲ ಏಕೆಂದರೆ ವಾಹನಕ್ಕೆ, ಅಪಘಾತ ವಿಮೆ ಮಾಡಿಸಿರುವುದಿಲ್ಲ. ಆಟೋ ಡ್ರೈವರ್ ವಾಹನ ಚಲಾಯಿಸಲು ಪರವಾನಿಗೆ ಪಡೆದಿರುವುದಿಲ್ಲ. ಇವರ ನಿರ್ಲಕ್ಷದಿಂದ ಸತ್ತವರಿಗೆ ಏನು ದೊರಕದೇ ಕುಟುಂಬಗಳು ಬೀದಿ ಪಾಲಾಗುತ್ತಿದ್ದಾರೆ. ತಕ್ಷಣವೇ ವಾಹನಗಳಿಗೆ ಅಪಘಾತ ವಿಮೆ ಡ್ರೈವರ್ ಗಳಿಗೆ ಲೈಸನ್ಸ್ ಕಡ್ಡಾಯ ಮಾಡಿಸಿಕೊಳ್ಳುವಂತೆ ಅರಿವು ಮೂಡಿಸಬೇಕು. ಆಟೋ, ಟ್ರಾಕ್ಸಿ, ಟ್ರ್ಯಾಕ್ಟರ್ , ಲಾರಿ, ಬಸ್ಸು, ಅನೇಕ ತರಹದ ವಾಹನ ಮಾಲೀಕರಿಗೆ ಖಡ್ಡಾಯವಾಗಿ ವಾಹನಗಳ ಅಧಿಕೃತ ದಾಖಲೆ ಮಾಡಿಸುವಂತೆ ಹಾಗೂ ಬೈಕ್ ಸವಾರರಿಗೂ ಇದೇ ಕಾನೂನು ಪಾಲಿಸುವಂತೆ ಕಟ್ಟುನಿಟ್ಟು ಅದೇಶ ಮಾಡಬೇಕು. ಗಡುವು ನೀಡಿ ಎಲ್ಲಾ ವಾಹನಗಳನ್ನು ತನಿಖೆಗೆ ಒಳಪಡಿಸಬೇಕು ಹಾಗೂ ವಿನಾಕಾರಣ ತನ್ನಲ್ಲಿದ್ದ ತಪ್ಪಿಗೆ ಅಮಾಯಕ ಜೀವ ಕಳೆದುಕೊಳ್ಳುತ್ತಿರುವುದನ್ನು ತಪ್ಪಿಸಬೇಕು. ಸಾರ್ವಜನಿಕ ಪ್ರಾಣಕ್ಕೆ ಬೆಲೆಕೊಟ್ಟು ರಾಜಕಾರಣಗಳ ಒತ್ತಡಕ್ಕೆ ಮಣಿಯದಂತೆ ಕಾನೂನು ರೀತಿಯ ಕ್ರಮತೆಗೆದುಕೊಳ್ಳಬೇಕು ಎಂದರು. ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಉಪಾಧ್ಯಕ್ಷ ಬೇಡರಡಿಹಳ್ಳಿ ಬಸವ ರೆಡ್ಡಿ .ತಾಲ್ಲೂಕು ಅಧ್ಯಕ್ಷ ರವಿಕುಮಾರ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಕೊಂಡಾಪುರ ಪರಮೇಶ್ವರಪ್ಪ, ಸಂಜೀವಪ್ಪ ಎನ್ ಚಂದ್ರಣ್ಣ ಮಂಜುನಾಥ್ ಕೃಷ್ಣಮೂರ್ತಿ ಬಡೊಬಯ್ಯ ಹುಲುಗಪ್ಪ ಮುನ್ನ ಯೇರ್ಜನಹಳ್ಳಿ ನಾಗರಾಜ್ ತಿಪ್ಪೇಸ್ವಾಮಿ ಮುಂತಾದವರು ಉಪಸ್ಥಿತರಿದ್ದರು

## ಫಾಸ್ಟ್ ನ್ಯೂಸ್

### ಕೃಷಿ ಪಂಡಿತ ಪ್ರಶಸ್ತಿಗೆ ರೈತರಿಂದ ಅರ್ಜಿ ಆಹ್ವಾನ

» **ಹೊಸದುರ್ಗ**

ಸರ್ಕಾರ ಕೃಷಿ ಇಲಾಖೆಯ ಮೂಲಕ ರಾಜ್ಯ ಮಟ್ಟದ ಉತ್ತಮ ಕೃಷಿ ಪಂಡಿತ ಪ್ರಶಸ್ತಿ ನೀಡಲು ಅರ್ಜಿ ಆಹ್ವಾನಿಸಿದ್ದು ರೈತರು ತಮ್ಮ ಎಲ್ಲಾ ವಿವರಗಳೊಂದಿಗೆ ಜುಲೈ 24 ರೊಳಗೆ ಸಹಾಯಕ ಕೃಷಿ ನಿರ್ದೇಶಕರು, ಹೊಸದುರ್ಗ ಇವರಿಗೆ ಸಲ್ಲಿಸಲು ಮನವಿ ಮಾಡಲಾಗಿದೆ. ಆಯ್ಕೆಯಾದ ಕೃಷಿ ಪಂಡಿತರಿಗೆ ಕ್ರಮವಾಗಿ ಪ್ರಥಮ ಬಹುಮಾನ 1.25 ಲಕ್ಷ, ದ್ವಿತೀಯ ಬಹುಮಾನ ಒಂದು ಲಕ್ಷ, ತೃತೀಯ ಬಹುಮಾನ 75 ಸಾವಿರ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ ಕೃಷಿ ಅಧಿಕಾರಿ, ರೈತ ಸಂಪರ್ಕ ಕೇಂದ್ರಗಳನ್ನು ಸಂಪರ್ಕಿಸಲು ಸಹಾಯಕ ಕೃಷಿ ನಿರ್ದೇಶಕ ಸಿ.ಎನ್.ಈಶ ತಿಳಿಸಿದ್ದಾರೆ.

### ಮೂವರು ಐಎಎಸ್ ಅಧಿಕಾರಿಗಳ ವರ್ಗಾವಣೆ

» **ಬೆಂಗಳೂರು**

ಆಡಳಿತಾತ್ಮಕ ಕಾರಣದಿಂದಾಗಿ ರಾಜ್ಯ ಸರ್ಕಾರವು ಮೂವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶಿಸಿದೆ. ಈ ಸಂಬಂಧ ಅಧಿಸೂಚನೆ ಹೊರಡಿಸಲಾಗಿದ್ದು, ಐಎಎಸ್ ಅಧಿಕಾರಿ ಪವನ್ ಕುಮಾರ್ ಮಲಪತಿ ಅವರನ್ನು ಬಳ್ಳಾರಿ ಜಿಲ್ಲಾಧಿಕಾರಿ ಹುದ್ದೆಯಿಂದ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕಮೀಷನರ್ ಆಗಿ ನಿಯೋಜಿಸಿದೆ.ಹುದ್ದೆಯ ನಿರೀಕ್ಷೆಯಲ್ಲಿದ್ದಂತ ಐಎಎಸ್ ಅಧಿಕಾರಿ ರಮೇಶ್ ಕೆ.ಎನ್ ಅವರನ್ನು ಸಮಗ್ರ ಶಿಕ್ಷಣ ಇಲಾಖೆಯ ಪ್ರೊಜೆಕ್ಟ್ ಡೈರೆಕ್ಟರ್ ಆಗಿ ನೇಮಿಸಿದೆ. ಇನ್ನೂ ಕೆ ಎಸ್ ಆರ್ ಟಿ ಸಿ ಡೈರೆಕ್ಟರ್ ಆಗಿದ್ದಂತ ಪ್ರಶಾಂತ್ ಕುಮಾರ್ ಮಿಶ್ರಾ ಅವರನ್ನು, ಬಳ್ಳಾರಿ ಜಿಲ್ಲೆಯ ಜಿಲ್ಲಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ.

### ಒಂದು ವರ್ಷದಲ್ಲೇ ಕೊಚ್ಚಿ ಹೋದ ರಸ್ತೆ

» **ಉಡುಪಿ**

ತಗ್ಗರ್ಸೆ ಗ್ರಾಮದಲ್ಲಿ ಭಾರಿ ಮಳೆಗೆ ರಸ್ತೆ ಕೊಚ್ಚಿಹೋಗಿದೆ. ಬೈಂದೂರು ಪಟ್ಟಣ ಪಂ. ವ್ಯಾಪ್ತಿಯ ತಗ್ಗರ್ಸೆ ಕಾಮಗಾರಿ ಮುಗಿದು ಒಂದು ವರ್ಷದಲ್ಲೇ ಸಂಪರ್ಕ ರಸ್ತೆ ನೀರುಪಾಲಾಗಿದೆ. ಕಳಪೆ ಕಾಮಗಾರಿ ಹಿನ್ನೆಲೆ ರಸ್ತೆಗೆ ಹಾಕಿದ್ದ ಮಣ್ಣು ಕೊಚ್ಚಿಹೋಗಿದೆ. ರಸ್ತೆ ಕಾಮಗಾರಿಗಾಗಿ ಮೂರು ಲಕ್ಷ ರೂ. ಅನುದಾನ ಬಿಡುಗಡೆಯಾಗಿತ್ತು.

### ಹೇಮಾವತಿ ನದಿಗೆ ಉರುಳಿ ಬಿದ್ದ 2 ಕಾರು

» **ಚಿಕ್ಕಮಗಳೂರು**

ಜಿಲ್ಲೆಯಲ್ಲಿ ಮಳೆ ಆರ್ಭಟ ಮುಂದುವರಿದ್ದು, ಎರಡು ಕಾರುಗಳು ಹೇಮಾವತಿ ನದಿಗೆ ಉರುಳಿಬಿದ್ದಿರುವ ಘಟನೆ ಮೂಡಿಗೆರೆ ತಾಲೂಕಿನ ಬಣಕಲ್ ಬಳಿ ನಡೆದಿದೆ. ಚಾಲಕರ ನಿಯಂತ್ರಣ ತಪ್ಪಿ ಬಣಕಲ್ ಸಮೀಪ ಹೇಮಾವತಿ ನದಿಗೆ ಶಿಫ್ಟ್ ಹಾಗೂ ಇನೋವಾ ಕಾರು ಬಿದ್ದಿವೆ. ಇನೋವಾ ಕಾರು ಪುತ್ತೂರಿನಿಂದ ಚಿಕ್ಕಮಗಳೂರಿಗೆ ಹೋಗುತ್ತಿತ್ತು. ಎರಡು ಕಾರಿನ ಪ್ರಯಾಣಿಕರಿಗೆ ಸಣ್ಣ ಪುಟ್ಟ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಬಣಕಲ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ.

### ಕಬಿನಿ ಜಲಾಶಯಕ್ಕೆ ಒಳಹರಿವು ಹೆಚ್ಚಳ



» **ಮೈಸೂರು**

ಕೇರಳದ ವಯನಾಡು ಭಾಗದಲ್ಲಿ ಮಳೆ ಪ್ರಮಾಣ ಹೆಚ್ಚಿದ ಪರಿಣಾಮ ಕಬಿನಿ ಜಲಾಶಯಕ್ಕೆ ಒಳಹರಿವು ಹೆಚ್ಚಾಗಿದೆ. ಹೆಚ್ ಡಿ ಕೋಟೆ ತಾಲ್ಲೂಕು ಬೀಚನಹಳ್ಳಿ ಗ್ರಾಮದ ಬಳಿ ಇರುವ ಕಬಿನಿ ಜಲಾಶಯ 84 ಅಡಿ ಗರಿಷ್ಠ ಸಾಮರ್ಥ್ಯ ಹೊಂದಿದೆ. ಜಲಾಶಯದ ಇಂದಿನ ನೀರಿನ ಮಟ್ಟ 78.31 ಅಡಿ, ಜಲಾಶಯದ ಇಂದಿನ ಒಳಹರಿವು 20,749 ಕ್ಯೂಸೆಕ್, ಜಲಾಶಯದ ಹೊರಹರಿವು 3333 ಕ್ಯೂಸೆಕ್, ಗರಿಷ್ಠ 19.52 ಟಿಎಂಸಿ ನೀರು ಸಂಗ್ರಹದ ಸಾಮರ್ಥ್ಯ ಇದೆ. ಜಲಾಶಯದಲ್ಲಿ ಸದ್ಯಕ್ಕೆ 16.09 ಟಿಎಂಸಿ ನೀರು ಸಂಗ್ರಹವಾಗಿದೆ.

### ಹಾಸನ ಜಿಲ್ಲೆಯಲ್ಲಿ ಭಾರಿ ಮಳೆ; ಸೇತುವೆ ಮುಳುಗಡೆ

» **ಹಾಸನ**

ಜಿಲ್ಲೆಯ ವಿವಿಧೆಡೆ ಭಾರಿ ಮಳೆಯಾಗುತ್ತಿರುವ ಹಿನ್ನೆಲೆ ಸಕಲೇಶಪುರ ತಾಲ್ಲೂಕಿನ, ಮಾಗೇರಿ ಗ್ರಾಮದ ಸೇತುವೆ ಮುಳುಗಡೆಯಾಗಿದೆ. ಸೇತುವೆ ಮೇಲೆ ನೀರು ಹರಿಯುತ್ತಿರುವುದರಿಂದ ಸೋಮವಾರಪೇಟೆ–ಮಾಗೇರಿ ರಸ್ತೆ ಸಂಪೂರ್ಣ ಬಂದ್ ಮಾಡಲಾಗಿದೆ. ರಸ್ತೆ ಸಂಪರ್ಕವಿಲ್ಲದೆ ಗ್ರಾಮಸ್ಥರು ಪರದಾಡುತ್ತಿದ್ದಾರೆ.

# ಪತ್ರಿಕೆಗಳು ಬಡವರ ಧ್ವನಿಯಾಗಲಿ: ರಘುಮೂರ್ತಿ

» **ಚಳ್ಳಕೆರೆ**

ಕಳೆದ ಹಲವಾರು ದಶಕಗಳಿಂದ ಕಾಯಾಂಗ, ಶಾಸಕಾಂಗ, ನ್ಯಾಯಾಂಗದ ನಡುವೆ ಉತ್ತಮ ಬಾಂಧ್ಯವನ್ನು ನಿರ್ಮಿಸಿ ಜನಸಾಮಾನ್ಯರ ಒಳಿತಿಗಾಗಿ ನಿರಂತರ ಶ್ರಮಿಸುತ್ತಿರುವ ಪತ್ರಿಕಾ ರಂಗ ಇಂದು ಜನಸಾಮಾನ್ಯರ ಧ್ವನಿಯಾಗಿದೆ. ದಕ್ಷತೆ ಮತ್ತು ಪ್ರಾಮಾಣಿಕತೆಯನ್ನು ಈ ಕ್ಷೇತ್ರದ ಗೌರವವನ್ನು ಹೆಚ್ಚಿಸುವ ಕೆಲಸವನ್ನು ಪತ್ರಕರ್ತರು ನಿರಂತರ ಮಾಡಬೇಕು ಎಂದು ಕ್ಷೇತ್ರದ ಶಾಸಕ ಟಿ.ರಘುಮೂರ್ತಿ ತಿಳಿಸಿದರು.

ಅವರು, ಭಾನುವಾರ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಎರಡನೇ ವರ್ಷದ ಪತ್ರಿಕಾ ದಿನಾಚರಣೆ ಕಾರ್ಯಕ್ರಮವನ್ನು ಗಿಡಕ್ಕೆ ನೀರು ಎರೆಯುವ ಮೂಲಕ ಚಾಲನೆ ನೀಡಿ ಮಾತನಾಡಿದರು.

ಪತ್ರಿಕಾ ರಂಗದ ಸ್ನೇಹಿತರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವ ಬಗ್ಗೆ ನನಗೆ ಮಾಹಿತಿ ಇದೆ. ಕೆಲವೊಂದು ಮೂಲ ಸೌಲಭ್ಯಗಳನ್ನು ಒದಗಿಸುವ ಜವಾಬ್ದಾರಿ ಸರ್ಕಾರದ್ದಾಗಿದೆ. ಈ ಹಿನ್ನೆಲೆಯಲ್ಲಿ ಪತ್ರಕರ್ತರ ಹಿತರಕ್ಷಣೆಗೆ ನಾನು ಬದ್ಧವಾಗಿದ್ದು, ಸೌಲಭ್ಯ ಕುರಿತು ಸರ್ಕಾರದೊಂದಿಗೆ ಚರ್ಚೆ ನಡೆಸುವ ಭರವಸೆ ನೀಡಿದರು.



ಚಳ್ಳಕೆರೆ ನಗರದ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ನಡೆದ ಪತ್ರಿಕಾ ದಿನಾಚರಣೆಯನ್ನು ಶಾಸಕ ಟಿ.ರಘುಮೂರ್ತಿ ಉದ್ಘಾಟಿಸಿದರು. ವಿವಿಧ ಕ್ಷೇತ್ರದಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಯಿತು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಬಂಗ್ಲೆಮಲ್ಲಿಕಾರ್ಜುನ, ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಬಹುತೇಕ ಎಲ್ಲಾ ಪಕ್ಷದ ಸರ್ಕಾರಗಳು ಪತ್ರಕರ್ತರಿಗೆ ಅಗತ್ಯವಿರುವ ಯಾವುದೇ ಸೌಲಭ್ಯ ನೀಡಲು ಮುಂದಾಗಲಿಲ್ಲ. ಮಳೆ, ಬಿಸಲು, ಹಗಲು, ರಾತ್ರಿ ಎನ್ನದೆ ದಿನವಿಡಿ ತಮ್ಮ ಕ್ಷೇತ್ರಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪತ್ರಕರ್ತರಿಗೆ ಸರ್ಕಾರದ ಸಹಾಯ ಬೇಕೆಬೇಕು. ರಾಜ್ಯದಲ್ಲಿ 16 ಸಾವಿರ ಪತ್ರಕರ್ತರಿದ್ದು, ಕೇವಲ 160 ಪತ್ರಕರ್ತರಿಗೆ ಮಾತ್ರ ಮಾನ್ಯತೆ ಕಾರ್ಡ್ ನೀಡಿ ಸೌಲಭ್ಯ ನೀಡಲಾಗಿದೆ. ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಪತ್ರಕರ್ತರಿಗೆ ಸರ್ಕಾರಿ ಬಸ್‌ಗಳಲ್ಲಾದರೂ ಉಚಿತ ಬಸ್ ಪಾಸ್ ನೀಡುವ ಕುರಿತು ಶಾಸಕರು ಸಂಬಂಧಪಟ್ಟ ಸಚಿವರೊಂದಿಗೆ ಚರ್ಚಿಸಬೇಕು ಎಂದರು.

ಉಪನ್ಯಾಸ ನೀಡಿದ ತಾಲ್ಲೂಕು ವಕೀಲರ ಸಂಘದ ಅಧ್ಯಕ್ಷ ಜಿ.ಎಂ. ಆನಂದಪ್ಪ, ಯಾವುದೇ ಸೌಲಭ್ಯ ಸೌಕರ್ಯ ಪ್ರತಿಫಲವಿಲ್ಲದೆ ಅತ್ಯಂತ ದಕ್ಷತೆ, ಕ್ರಿಯಾಶೀಲವಾಗಿ ತಮ್ಮ ಪಾಲಿನ ಕರ್ತವ್ಯವನ್ನು ನಿಷ್ಠೆಯಿಂದ ಮಾಡುವ ಮೂಲಕ ಪತ್ರಕರ್ತರು ಇಂದು ಜನರ ಮನಗೆದ್ದಿದ್ದಾರೆ. ರಾಜಕಾರಣಿಗಳು, ಅಧಿಕಾರಿಗಳು ಸೇರಿದಂತೆ ಸಮಾಜದ ವಿರುದ್ಧ ನಡೆಯುವ ವಿಷಯಗಳನ್ನು ಜನರಿಗೆ ಮುಟ್ಟಿಸುವ ಕೆಲಸವನ್ನು ಪತ್ರಿಕೆಗಳು ಮಾಡುತ್ತಾ ಬಂದಿವೆ. ಪ್ರಸ್ತುತ ದಿನಗಳಲ್ಲಿ ನಾವು ಪತ್ರಿಕೆಗಳಿಗೆ ಎಲ್ಲಾ ಸ್ವಾತಂತ್ರ್ಯವನ್ನು ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಪದಕ ವಿಜೇತ, ಗೃಹರಕ್ಷಕ ದಳದ ಕಮಾಂಡೇಟ್ ಡಾ.ಎಸ್.ಡಿ.ಲೋಕೇಶ್, ವಾರಿಯರ್ಸ್ ವ್ಯವಸ್ಥಾಪಕ ಮಾರುತಿ, ಕರ್ನಾಟಕ ರಾಜ್ಯ ರೈತ ಸಂಘ ಸಂಸ್ಥಾಪಕ ಅಧ್ಯಕ್ಷ ಸೋಮಗುದ್ದುರಂಗಸ್ವಾಮಿ, ಪತ್ರಕರ್ತರಾದ ಕೊರ್ಲಕುಂಟೆ ತಿಪ್ಪೇಸ್ವಾಮಿ, ರಾಮಾಂಜನೇಯ, ಹರೀಶ್, ರೈತ ಮುಖಂಡ ಚಂದ್ರಪ್ಪ, ನಗರಸಭಾ ಸದಸ್ಯೆ ಎಂ.ಸಾವಿತ್ರಮ್ಮ, ಕಲಾವಿದರಾದ ಆರಾಧ್ಯ, ರವಿ ಇವರನ್ನು ಸನ್ಮಾನಿಸಲಾಯಿತು.

ವೇದಿಕೆಯಲ್ಲಿ ನಗರಸಭಾ ಸದಸ್ಯರಾದ ಎಂ.ಜೆ.ರಾಘವೇಂದ್ರ, ಆರ್.ರುದ್ರನಾಯಕ, ಮುಖಂಡರಾದ ರಾಘವೇಂದ್ರನಾಯಕ, ಶ್ರೀನಿವಾಸ್, ಗೋಪಾಲಯ್ಯ, ನಾವೆಲ್ಲಮಹೇಶ್, ಮೈತ್ರಿದ್ಯಾಮಣ್ಣ, ತಾಲ್ಲೂಕುಅಧ್ಯಕ್ಷದ್ಯಾಮರಾಜು,ಡಿ.ವೀರಣ್ಣ, ಜಾಲಿಮಂಜುನಾಥ, ನಾಗರಾಜು, ಗ್ರಾಮ ಪಂಚಾಯಿತಿ ಅಧ್ಯಕ್ಷೆ ಪಾರಿಜಾತ, ವಕೀಲ ಜಂಡೇಕುಂಟೆಕುಮಾರ್, ಎಂ.ರಘುನಾಗ ಮುಂತಾದವರು ಉಪಸ್ಥಿತರಿದ್ದರು.

# ಪಲ್ಸ್ ಪೋಲಿಯೋ ಕಟ್ಟು ನಿಟ್ಟಾಗಿ ಪ್ರಗತಿ ಆಗಿದೆ ಎಂದರೆ ಅದು ರೋಟರಿ ಸಾಧನೆ

» **ಹೊಸದುರ್ಗ**

ರೋಟರಿ ಕ್ಲಬ್ ಸಂಸ್ಥೆಯ ಸಾಧನೆ ತುಂಬಾ ದೊಡ್ಡದು,ರೋಟರಿ ಸಂಸ್ಥೆ 1905 ರಲ್ಲಿ ಈ ನಾಡಿನಲ್ಲಿ ಹುಟ್ಟಿ ಬೆಳೆದ ಸ್ವಾಮಿವಿವೇಕಾನಂದರು ಪ್ರತಿನಿಧಿಸಿ ಬಂದ ಅಮೇರಿಕಾದ ಚಿಕಾಗೋದಲ್ಲಿ ಸ್ಥಾಪನೆಯಾದ ಈ ಸಂಸ್ಥೆ ಸಾಮಾಜಿಕ ಕ್ಷೇತ್ರದಲ್ಲಿ ತನ್ನದ ಆದ ಅಪಾರವಾದ ಕೊಡುಗೆಗಳನ್ನ ನೀಡಿರುವ ಒಂದು ಮಹತ್ವದ ಸಂಸ್ಥೆಯಾಗಿದೆ ಎಂದು ರೋಟರಿ ಕ್ಲಬ್ ಹೊಸದುರ್ಗ ಶಾಖೆಯ ನೂತನ ಅಧ್ಯಕ್ಷ ಜಯರಾಂಬಾಬು ತಿಳಿಸಿದರು.




ಪಟ್ಟಣದ ಹುಳಿಯಾರು ರಸ್ತೆಯ ಹೌಸಿಂಗ್ ಬೋರ್ಡ್ ಮುಂಭಾಗ ಇರುವ ಗೋಲ್ಡನ್ ಇಲ್ ರೆಸಾರ್ಟ್‌ನಲ್ಲಿ ಹಿರಿಯೂರು ರೋಟರಿ ಕ್ಲಬ್ ವತಿಯಿಂದ ನಡೆದ ಪದಗ್ರಹಣ ಕಾರ್ಯಕ್ರಮದಲ್ಲಿ ಪದಗ್ರಹಣ ಸ್ವೀಕರಿಸಿ ಮಾತನಾಡಿದರು.

ಕಳೆದ 7 ವರ್ಷಧ ಹಿಂದೆ ಪಾಕಿಸ್ತಾನಕ್ಕೆ ಹೋಗಿದ್ದೆವು,ಅಲ್ಲಿ ನಮಗೆ ಪಲ್ಸ್ ಪೋಲಿಯೋ ಹಾಕಿ ಸರ್ಟಿಫಿಕೇಟ್ ಇಲ್ಲದೆ ನಮ್ಮನ್ನ ಒಳಗೆ ಬಿಟ್ಟಿದ್ದರು, ನಮ್ಮ ದೇಶದಲ್ಲಿ ಇಷ್ಟೊಂದು ಪಲ್ಸ್ ಪೋಲಿಯೋ ಹಾಗೂ ಕಟ್ಟು ನಿಟ್ಟಾಗಿ ಪ್ರಗತಿ ಆಗಿದೆ ಎಂದರೆ ಅದು ರೋಟರಿ ಸಂಸ್ಥೆಯ ಕಾರ್ಯ ಹಾಗೂ ಸಾಧನೆ ಅಪಾರವಾಗಿದೆ.

ಈ ನಿಟ್ಟಿನಲ್ಲಿ ನಮ್ಮ ದೇಶ ಸುರಕ್ಷಿತವಾಗಿದೆ, ಕೋರೋನಾ ಸಮಯದಲ್ಲಿ ಸಂಸ್ಥೆಯ ವತಿಯಿಂದ ಸಾಕಷ್ಟು ಸಾರ್ಥಕವಾದ ಕೆಲಸಗಳಾಗಿವೆ, ಸಾಮಾಜಿಕ ಕ್ಷೇತ್ರಕ್ಕಾಗಿ ಸಂಸ್ಥೆ ನೂರಾರು ಕೋಟಿ ಹಣ ವ್ಯಯ ಮಾಡಿದೆ ಹಾಗೂ ಈಗಲು ವ್ಯಯ ಮಾಡುತ್ತಲೆ ಇದೆ ಎಂದು ತಿಳಿಸಿದ ಅವರು ಆರೋಗ್ಯ ಮತ್ತು ವಿದ್ಯಾಭ್ಯಾಸ ಕ್ಷೇತ್ರದಲ್ಲಿ ರೋಟರಿ ಸಂಸ್ಥೆಯ ಸೇವೆ ಸಾಕಷ್ಟಿದೆ ಎಂದು ಶ್ಲಾಘಿಸಿದರು.

ಪೋಷಕರು ಉನ್ನತ ಮಟ್ಟದ ಶಿಕ್ಷಣಕ್ಕೆ ಕಳುಹಿಸುವ ಸಲುವಾಗಿ ಲಕ್ಷಾಂತರ ಹಣ ವ್ಯಯ ಮಾಡುತ್ತಾರೆ, ಉನ್ನತ ಮಟ್ಟದ ಶಿಕ್ಷಣಕ್ಕೆ ಬಡವರ ಮಕ್ಕಳು ಹೋಗಲು ಅಸಾಧ್ಯ ಈ ನಿಟ್ಟಿನಲ್ಲಿ ಅಂತಹ ಕಡು ಬಡವರು ಇದ್ದರೆ ರೋಟರಿ ಗಮನಕ್ಕೆ ತನ್ನಿ ಲಕ್ಷಾಂತರ ನೀಡುವ ಹಣವನ್ನ ಸಾವಿರಾರು ರೂಗಳಲ್ಲಿ ವ್ಯವಸ್ಥೆ ಮಾಡುವ ಮೂಲಕ ಸಹಾಯ ಮಾಡುತ್ತೇವೆ ಎಂಬ ಆಶ್ವಾಸನೆಯನ್ನ ನೀಡಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಗೌವರ್ನರ್ ವಾಮಿನಿಸತೀಶ್,ಕಾರ್ಯದರ್ಶಿ,ಸತೀಶ್ ಟಿ.ಎಂ, ವಿಶೇಷ ಆಹ್ವಾನಿತರಾಗಿ ರೋಟರಿ ಕ್ಲಬ್‌ನ ಎಂ.ಕೆ. ರವೀಂದ್ರ, ಮೇಶ್‌ವಿ.ತುಪಾದ್, ಎಂ.ಎಸ್. ರಾಘವೇಂದ್ರ, ಹೆಚ್.ಕಿರಣ್‌ಕುಮಾರ್, ಸುದರ್ಶನ್‌ಕುಮಾರ್ ಹಾಗೂ ಹಿರಿಯೂರು ರೋಟರಿ ಅಧ್ಯಕ್ಷ ಡಿ.ದೇವರಾಜ್‌ಮೂರ್ತಿ ಮತ್ತು ಕಾರ್ಯದರ್ಶಿ ಎಸ್.ಜೋಗಪ್ಪ ರೋಟರಿ ಕ್ಲಬ್ ಸಂಪರ್ಕ ಅಧಿಕಾರಿ ಗುರುರಾಜ್‌ದೇಶಪಾಂಡೆ ಶ್ರಿ ವೀರಶೈವ ಮಹಿಳಾ ಸಹಕಾರ ಸಂಘದ ಅಧ್ಯಕ್ಷ ಶ್ರೀಮತಿ ಅನಿಜಾರಾಜೇಶ್ ಮತ್ತಿತರರು ಭಾಗವಹಿಸಿದ್ದರು.ಪೀಲಾಪುರ ಕಂಠೇಶ್ ಕಾರ್ಯಕ್ರಮ ನಿರೂಪಿಸಿದರು.

# ಸಮಾನತೆಯ ಸಹಬಾಳ್ವೆ ಪ್ರತಿಯೊಬ್ಬ ನಾಗರಿಕನ ಸಂವಿಧಾನ ಬದ್ಧ ಹಕ್ಕು



» **ಮೊಳಕಾಲ್ಮೂರು**

ದೇಶದ ಪ್ರತಿಯೊಬ್ಬ ನಾಗರಿಕನು ಸಂವಿಧಾನ ಬದ್ಧ ಆಶಯಗಳೊಂದಿಗೆ ಸಮಾನತೆಯ ಸಹಬಾಳ್ವೆಯಿಂದ ಸಮಾಜ ಮತ್ತು ಸಮುದಾಯದಲ್ಲಿ ಗೌರವಯುತ ಬದುಕು ನಡೆಸಬೇಕು ಎಂದು ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಗುಜ್ಜಾರಪ್ಪ ತಿಳಿಸಿದರು.

ತಾಲ್ಲೂಕಿನ ಚಿಕ್ಕೋಬನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಹಾಗೂ ಅಸ್ಪೃಶ್ಯತಾ ನಿವಾರಣ ಜಾಗೃತಿ ಕಾರ್ಯಕ್ರಮವನ್ನು ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಹಾಗೂ ಅಕ್ಷರ ಗ್ರಾಮೀಣ ವಿಕಾಸ ಸಂಸ್ಥೆ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಭಾರತ ದೇಶಕ್ಕೆ ಸ್ವತಂತ್ರ ಬಂದು 75 ವರ್ಷ ಕಳೆದಿದೆಯಾದರೂ ಎಸ್ಸಿ ಎಸ್ಟಿ ಮೇಲೆ ದೌರ್ಜನ್ಯವನ್ನು ಮಾಡುತ್ತಿರುವ ಪ್ರಕರಣಗಳನ್ನು ನಾವು ಕೇಳುತ್ತಿದ್ದೇವೆ, ಮೇಲು ಕೀಳು ಎನ್ನುವ ಭಾವವಿಲ್ಲದೆ ಎಲ್ಲರೂ ಸಮಾನ ಎನ್ನುವ ಮನಸ್ಥಿತಿಯಲ್ಲಿ ನಡೆದು ಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಜಾಗೃತಿ ಸಮಿತಿ ಸದಸ್ಯ ಡಿ ಓ ಮೊರಾರ್ಜಿ ಮಾತನಾಡಿ ಹಿಂದುಳಿದ ವರ್ಗ ಅಲ್ಪಸಂಖ್ಯಾತರ ದೀನದಲಿತರ ಎಲ್ಲಾ ಸಮುದಾಯದವರು ಸಮಾನ ಬದುಕು ಕಟ್ಟಿಕೊಳ್ಳಲು ಡಾ :ಬಿ. ಆರ್ ಅಂಬೇಡ್ಕರ್ ರವರು ಶ್ರಮವಹಿಸಿ ಭಾರತ ದೇಶದ ಕಾನೂನು ವ್ಯವಸ್ಥೆಯನ್ನು ಕಲ್ಪಿಸಿ ಕೊಟ್ಟಿದ್ದು ಭಾರತ ದೇಶದ ಪ್ರತಿಯೊಬ್ಬ ನಾಗರಿಕನು ತಮ್ಮ ಬದುಕನ್ನು ಕಟ್ಟಿಕೊಳ್ಳಲು ಕಾನೂನಾತ್ಮಕ ಚಿಂತನೆಗಳು ಸಹಕಾರಿಯಾಗಿದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.ಕರ್ನಾಟಕ ದಲಿತ ಸಂಘರ್ಷ ಸಮಿತಿ ಸಂಚಾಲಕರದ ಓ ಕರಿಬಸಪ್ಪ ಮಾತನಾಡಿ ಭಾರತ ದೇಶದಲ್ಲಿ ಇಂದಿಗೂ ಗ್ರಾಮೀಣ ಪ್ರದೇಶಗಳಲ್ಲಿ ಅಸ್ಪೃಶ್ಯತೆ ನಿವಾರಣೆಯಾಗಿಲ್ಲ, ಜಾತಿಭೇದ ತಾರತಮ್ಯ ಮಾಡುತ್ತಿದ್ದಾರೆ. ಡಾ : ಬಿ ಆರ್ ಅಂಬೇಡ್ಕರ್ ಸಂಕಲ್ಪ ಎಲ್ಲರೂ ಸಮಾನರು ಮತ್ತು ಸಹಬಾಳ್ವೆಯನ್ನು ನಡೆಸಬೇಕು. ಜಾತಿ ಧರ್ಮ ಬಿಟ್ಟು ನಾವು ಭಾರತೀಯರು ಮಾನವರು ಎನ್ನುವ ದೃಷ್ಟಿಯಲ್ಲಿ ನಡೆದರೆ ದೇಶ ಅಭಿವೃದ್ಧಿ ಹೊಂದಲು ಸಾಧ್ಯ ವಾಗುತ್ತದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ತುಮಕೂರ್ಲಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಲಕ್ಷ್ಮಿ ದೇವಿ, ಸಮಾಜ ಕಲ್ಯಾಣ ಇಲಾಖೆ ಸಹಾಯಕ ನಿರ್ದೇಶಕರಾದ ಮಾಲತಿ, ಎಎಸ್ ಐ ಶರ್ಮಾ, ಗ್ರಾಮ ಲೆಕ್ಕಧಿಕಾರಿ ಪ್ರಶಾಂತ್, ಆನಂದ್, ಪಿಡಿಒ ಹೊನ್ನೂರಪ್ಪ ಮಹಾಂತೇಶ್ ಚಿದಾನಂದಪ್ಪ ಮುಖಂಡರಾದ ಎ□□□ನ್ ನಾಗಭೂಷಣ, ಜೆ ಬಿ ಹೇಮಣ್ಣ, ಸಂಗಮ ಮೇಘರಾಜ್ ದಾಸಪ್ಪ ಪೊಲೀಸ್ ವೀರಣ್ಣ, ಇನ್ನು ಮುಂತಾದವರು ಉಪಸ್ಥಿತರಿದ್ದರು

# ಮಕ್ಕಳು ನಿರಂತರ ಅಭ್ಯಾಸದಿಂದ ಯಶಸ್ಸು ಸಾಧ್ಯ: ಸಚಿವ ಡಿ.ಸುಧಾಕರ್

» **ಮೊದಲ ಪುಟದಿಂದ**

ಸರ್ಕಾರದ ಕೆಲಸವನ್ನು ಅಚ್ಚುಕಟ್ಟಾಗಿ ಮಾಡುವುದರಿಂದ ಅವರಿಗೆ ಸಮಾಜದಲ್ಲಿ ಉತ್ತಮ ಹೆಸರು ಗಳಿಸಬಹುದು. ಶಾಸಕಾಂಗ ಮತ್ತು ಕಾರ್ಯಾಂಗ ಸಮಾಜದ ಎರಡು ಚಕ್ರಗಳಿದ್ದಂತೆ ಎರಡರಲ್ಲಿ ಒಂದು ಏರುಪೇರು ಆದರಯ ಬಂಡಿ ನಿಲ್ಲುತ್ತದೆ.ಹಾಗಾಗಿ ನೌಕರರು ಉತ್ತಮ ಕೆಲಸಕ್ಕೆ ಒತ್ತು ನೀಡಿದರೇ ಎರಡು ಅಂಗಗಳು ಉತ್ತಮವಾಗಿರುತ್ತದೆ. ಕಾಂಗ್ರೆಸ್ ಸರ್ಕಾರ ಪ್ರಣಾಳಿಕೆಯಲ್ಲಿ ಸರ್ಕಾರಿ ನೌಕರರಿಗೆ ನೀಡಿದ ಭರವಸೆಗಳನ್ನು ಜಾರಿಗೊಳಿಸಲು ನಮ್ಮ ಮುಖ್ಯಮಂತ್ರಿಗಳು ಬದ್ಧವಾಗಿದ್ದಾರೆ.

ನಮ್ಮ ಸರ್ಕಾದ ಮೊದಲಿನಿಂದಲೂ ಸರ್ಕಾರಿ ನೌಕರರ ಪರವಾಗಿದೆ. ಇದರ ಜೊತೆಗೆ ಉತ್ತಮ ಅಭ್ಯಾಸ ಮೂಲಕ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡುತ್ತಿರುವುದು ಸಂತಸ ತಂದಿದೆ. ಮಕ್ಕಳ ಪ್ರೋತ್ಸಾಹ ನೀಡುವ ಉದ್ದೇಶದಿಂದ ಪ್ರತಿಭಾ ಪುರಸ್ಕಾರ ಮಾಡುತ್ತಾರೆ. ಮಕ್ಕಳು ನಿರಂತರ ಪರಿಶ್ರಮದಿಂದ ಇಂದು ಸನ್ಮಾನ ಸ್ವೀಕರಿಸುತ್ತಿದ್ದಾರೆ. ಮಕ್ಕಳು ಕಲಿಕೆಯ ಜೊತೆ ಸ್ಪರ್ಧಾತ್ಮಕ ಅಧ್ಯಯನಕ್ಕೆ ಸಿದ್ದವಾದರೆ ಜೀವನದಲ್ಲಿ ಉತ್ತಮ ಅವಕಾಶಗಳು ಹುಡುಕಿಕೊಂಡು ಬರುತ್ತದೆ. ನೌಕರರ ಸಮಸ್ಯೆಗಳ ಜೊತೆ ಷಡಾಕ್ಷರಿ ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದಾರೆ.ಜಿಲ್ಲಾ ಮತ್ತು ತಾಲೂಜ ನೌಕರರು ಸಮಸ್ಯೆಗಳಿಗೆ ನಾವು ಧ್ವನಿಯಾಗಿ ಕೆಲಸ ಮಾಡುತ್ತೇನೆ ಎಂದು ತಿಳಿಸಿದರು. ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಕ್ಷಾರಿ ಮಾತನಾಡಿ ಚಿತ್ರದುರ್ಗ ಜಿಲ್ಲೆ ಅನೇಕ ಹೋರಟಗಳಿಗೆ ಶಕ್ತಿ ನೀಡಿದ ಜಿಲ್ಲೆಯಾಗಿದೆ ಎಂದರು.

## ಪ್ರಮುಖ ಸುದ್ದಿ

# ಮಕ್ಕಳನ್ನ ಸಮಾಜದ ಅಸ್ತಿಯನ್ನಾಗಿ ಮಾಡಿ: ರಾಮಕೃಷ್ಣಪ್ಪ

» **ಹೊಸದುರ್ಗ**

ಮಡಿವಾಳ ಸಮಾಜ ಶೈಕ್ಷಣಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ಹಿಂದೆ ಉಳಿದಿದೆ, ಸಮಾಜ ಬಾಂಧವರು ತಮ್ಮ ಮಕ್ಕಳಿಗೆ ಆಸ್ತಿ ಮಾಡುವುದನ್ನು ಬಿಟ್ಟು ಅವರಿಗೆ ಉತ್ತಮವಾದ ವಿದ್ಯಾಭ್ಯಾಸ ನೀಡಿ ಸುಸಂಸ್ಕೃತರನ್ನಾಗಿ ಮಾಡುವುದರ ಮೂಲಕ ಮಕ್ಕಳನ್ನ ಸಮಾಜದ ಅಸ್ತಿಯನ್ನಾಗಿ ಮಾಡಿ ಎಂದು ಮಡಿವಾಳ ಸಮಾಜದ ಮುಖಂಡ ಹಾಗೂ ಸಮಾಜ ಸೇವಕ ಬಿ.ಆರ್.ರಾಮಕೃಷ್ಣಪ್ಪ ಕರೆ ನೀಡಿದರು.



ಪಟ್ಟಣದ ಕನ್ನಡ ಭವನದಲ್ಲಿ ನಾಗತಿಹಳ್ಳಿಮಂಜುನಾಥ್ ನಾಯಕತ್ವದಲ್ಲಿ ನಡೆದ ಚಿತ್ರದುರ್ಗ ಮತ್ತು ದಾವಣಗೆರೆ ಉಭಯಜಿಲ್ಲೆಗಳಎಸ್.ಎಸ್.ಎಲ್.ಸಿಮತ್ತು ಪಿ.ಯು.ಸಿ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನ ಉದ್ಘಾಟಿಸಿ ಮಾತನಾಡಿದರು.

ನಮ್ಮಲ್ಲಿ ಜಾಗೃತಿ ಇಲ್ಲದಿದ್ದರೆ ಸಮುದಾಯ ಅವನತಿಯತ್ತಾ ಹೋಗುತ್ತದೆ ಸಮುದಾಯಕ್ಕೆ ಸಂಪರ್ಕಗಳ ಅವಶ್ಯಕತೆ ಇದೆ, ಪರಿಶ್ರಮ ಇಲ್ಲದಿದ್ದರೆ ಬೆಳವಣಿಗೆ ಹಾಗಲು ಸಾಧ್ಯವಿಲ್ಲ, ಹಿಂದುಳಿದ ಸಮುದಾಯಗಳಿಗೆ ಸಹಾಯ ಮಾಡುವ ಗುಣ ಬೆಳೆಯಬೇಕಿದೆ ಎಂದು ಕರೆ ನೀಡಿದ ಅವರು ನಾವುಗಳು ಆರ್ಥಿಕವಾಗಿ, ಶೈಕ್ಷಣಿಕವಾಗಿ, ಸಾಮಾಜಿಕವಾಗಿ ಹಿದುಳಿದಿರುವ ನಮ್ಮ ಸಮಾಜಕ್ಕೆ ನ್ಯಾಯ ಸಿಗಬೇಕಾದರೆ ಮಡಿವಾಳರನ್ನು ಪರಿಶಿಷ್ಟ ಜಾತಿಗೆ ಸೇರಿಸಬೇಕು ಎಂದು ಒತ್ತಾಯಿಸಿದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಬಿ.ಪಿ.ಓಂಕಾರಪ್ಪ ಮಾತನಾಡಿ ಮಡಿವಾಳ ಮಾಚಿದೇವರದ್ದು ಮಲಿನವಾದ ಬಟ್ಟೆಗಳನ್ನು, ಮನಸ್ಸುಗಳನ್ನು ಮಡಿ ಮಾಡುವ ಕಾಯಕ. ಭಕ್ತರಲ್ಲದ ಭವಿಗಳ ಬಟ್ಟೆ ತೊಳೆಯುವುದಿಲ್ಲ ಎನ್ನುವುದು ಅವರ ಮಡಿವಾಳ ಮಾಚಿದೇವರ ಪ್ರತಿಜ್ಞೆ, ಕಲಿದೇವರದೇವ ಅಂಕಿತ. ಇವರ 346 ವಚನಗಳು ದೊರೆತಿವೆ. ಆಚಾರ, ವಿಚಾರ, ಏಕದೇವ ನಿಷ್ಠೆಗೆ ಹೆಸರಾದವರು ಮಡಿವಾಳ ಮಾಚಿದೇವರು ಅಂತಹ ಅದರ್ಶಗಳನ್ನ ಸಮಾಜದವರು ಹಾಗೂ ಇಂದಿನ ಯವಪೀಳಿಗೆ ಪಾಲಿಸಿಕೊಂಡು ಹೋಗಬೇಕಿದೆ ಎಂದರು.

ಶ್ರೀ ವೀರ ಮಡಿವಾಳ ಮಾಚಿದೇವ ಸಂಘದ ಶ್ರೀರಾಂಪುರ ಹೋಬಳಿ ಅಧ್ಯಕ್ಷ ಬಿ.ಲೋಕೇಶಪ್ಪ ಮಾತನಾಡಿ ಇಂದಿನ ನಾಗಲೋಟದ ದಿನಗಳಲ್ಲಿ ಶಿಕ್ಷಣ ಎಂಬುದು ಪ್ರತಿಯೋಬ್ಬರಿಗೂ ಸಹಾ ಅತ್ಯವಶ್ಯಕವಾದ್ದು ಮಡಿವಾಳ ಸಮಾಜ ಬಾಂಧವರು ತಮ್ಮ ತಮ್ಮ ಮಕ್ಕಳನ್ನ ಕೆಲಸ ಕಾರ್ಯಗಳಿಗೆ ಬಳಸಿಕೊಳ್ಳದೆ ಅವರನ್ನ ಶಾಲೆಗೆ ಕಳುಹಿಸುವ ಮೂಲಕ ಮಕ್ಕಳನ್ನ ಶಿಕ್ಷಣವಂತರನ್ನಾಗಿ ಮಾಡಿ ಸಮಾಜದ ಮುಖ್ಯ ವಾಹಿನಿಗೆ ಕರೆ ತನ್ನಿ ಎಂದು ಮನವಿ ಮಾಡಿದರು.

ಅಧ್ಯಕ್ಷತೆ ವಹಿಸಿದ್ದ ರಾಜ್ಯ ಶ್ರೀ ವೀರಮಡಿವಾಳಮಾಚಿದೇವಯುವಸೇನಾ ಪಡೆಯ ಅಧ್ಯಕ್ಷ ನಾಗತಿಹಳ್ಳಿಮಂಜುನಾಥ್ ಮಾತನಾಡಿರು.

ಸೇನಾ ಪಡೆಯ ಕಾರ್ಯಾಧ್ಯಕ್ಷ ಬೆನಕನಹಳ್ಳಿಶಿವಣ್ಣ ಪ್ರಾಸ್ತವಿಕವಾಗಿ ಮಾತನಾಡಿದರು. ಮುಖ್ಯ ಅತಿಥಿಗಳಾಗಿ ತಾಲೂಕು ಇಸ್ತ್ರೀ ಕಾರ್ಮಿಕರ ಸಂಘದ ಅಧ್ಯಕ್ಷ ಎಲ್.ಶಿವಣ್ಣ. ಸಮಾಜದ ಮುಖಂಡ ಎಂ. ಸುರೇಶ್ ಉಪಸ್ಥಿತರಿದ್ದರು. ಪ್ರಾರಂಭದಲ್ಲಿ ಜೆ.ಕವನ ಪ್ರಾರ್ಥಿಸಿದರು, ವಸಂತಕುಮಾರ್ ಕಾರ್ಯಕ್ರಮ ನಿರೂಪಿಸಿದರು.

> ಮಡಿವಾಳ ಸಮಾಜ ಪ್ರತಿಯೊಂದು ಕ್ಷೇತ್ರದಲ್ಲಿಯೂ ಹಿಂದುಳಿದಿರುವುದು ತೀರ್ವ ವಿಷಾದಕರ, ಸಮಾಜ ಮುಂದೆ ಬರುವ ನಿಟ್ಟಿನಲ್ಲಿ ಯುವಕರು ಎಚ್ಚೆತ್ತಕೊಳ್ಳಬೇಕಿದೆ, ಸಮಾಜವನ್ನ ಪರಿಶಿಷ್ಟ ಜಾತಿಗೆ ಸೇರಿಸುವ ವಿಚಾರದಲ್ಲಿ ಈಗಾಗಲೇ ಹಲವಾರು ಭಾರಿ ಸರ್ಕಾರದ ಜೊತೆ ಸ್ವಾಮೀಜಿಯವರು, ಸಮಾಜದ ಮುಖಂಡರುಗಳು ಹಾಗೂ ರಾಜ್ಯ ಜಿಲ್ಲಾ ತಾಲೂಕು ಸಂಘಗಳಿಂದ ಚರ್ಚಿಸಲಾಗಿದ್ದು ಮುಖ್ಯಮಂತ್ರಿಯವರು ಈ ವಿಷಯವನ್ನ ಗಂಭೀರವಾಗಿ ಪರಿಗಣಿಸಿ ಪರಿಶಿಷ್ಟ ಜಾತಿಗೆ ಸೇರಿಸುವ ಭರವಸೆಯನ್ನ ಸರ್ಕಾರ ನೀಡಬೇಕು ಎಂದು ಒತ್ತಾಯಿಸಿದ ಅವರು ನಮಗೆ ಮೀಸಲಾತಿ ಸಿಕ್ಕರೆ ಮಾತ್ರ ಮುಂದೆ ಬರಲು ಸಾಧ್ಯ.
>
> » **ನಾಗತಿಹಳ್ಳಿಮಂಜುನಾಥ್, ಅಧ್ಯಕ್ಷರು, ರಾಜ್ಯ ಶ್ರೀ ವೀರಮಡಿವಾಳ ಮಾಚಿದೇವ ಯುವ ಸೇನಾ ಪಡೆ**

# ಫಾಸ್ಟ್ ನ್ಯೂಸ್

## ಕರೇಕಲ್ ಆಂಜನೇಯಸ್ವಾಮಿ ದೇವಸ್ಥಾನದ ಬೀಗ ಮುರಿದ ಕಳ್ಳರು




» **ಚಳ್ಳಕೆರೆ**

ನಗರದ ನಾಯಕನಹಟ್ಟಿ ರಸ್ತೆಯ ವೆಂಕಟೇಶ್ವರ ನಗರ ಸಮೀಪವಿರುವ ಸಾವಿರಾರು ಭಕ್ತಯರ ಆರಾಧ್ಯದೈವವಾದಶ್ರೀಕರೇಕಲ್‌ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಭಾನುವಾರ ಬೆಳಗಿನ ಜಾವ ಯಾರೋ ಕಳ್ಳರು ದೇವಸ್ಥಾನದ ಮುಂಭಾಗಿಲ ಬೀಗ ಮತ್ತು ಒಳಗಡೆ ಇರುವ ಹುಂಡಿಯನ್ನು ಸಹ ಹೊಡೆದಿದ್ದಾರೆ. ಭಾನುವಾರ ಬೆಳಗ್ಗೆ ಎಂದಿನಂತೆ ಪೂಜೆಗೆಆಗಮಿಸಿದಅರ್ಚಕನಾಗಶಯನಗೌತಮ್ ದೇವಸ್ಥಾನದ ಬೀಗ ಒಡೆದಿರುವುದನ್ನು ನೋಡಿ ಕೂಡಲೇ ಪೊಲೀಸರಿಗೆ ಮಾಹಿತಿ ನೀಡಿದರು. ಸ್ಥಳಕ್ಕೆ ಆಗಮಿಸಿದ ಪೊಲೀಸರು ಪರಶೀಲನೆ ನಡೆಸಿದರು. ಈ ಬಗ್ಗೆ ಪತ್ರಿಕೆಯೊಂದಿಗೆ ಮಾತನಾಡಿದ ಅರ್ಚಕ ನಾಗಶಯನಗೌತಮ್, ಪಕ್ಕದಲ್ಲಿರುವ ತೋಟದಿಂದ ಕಳ್ಳರು ನುಸುಳಿದ ಬಗ್ಗೆ ಶಂಕೆ ಇದೆ. ಆದರೆ, ಗರ್ಭಗುಡಿ ಒಳಗೆ ಇರುವ ದೇವರ ಮೂರ್ತಿ ಮಾತ್ರ ಹಾಗೆ ಇದೆ. ಈ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಾಗಿದೆ ಎಂದರು.

## ಅರಣ್ಯ ಇಲಾಖೆಯ ನಿವೃತ್ತ ವಲಯ ಸಂಕ್ಷಣಾಧಿಕಾರಿ ಪಿ.ತಿಪ್ಪೇಸ್ವಾಮಿ ನಿಧನ

» **ಚಳ್ಳಕೆರೆ**

ಅರಣ್ಯ ಇಲಾಖೆಯ ಸಹಾಯಕ ವಲಯ ಸಂರಕ್ಷಣಾಧಿಕಾರಿಯಾಗಿ ನಿವೃತ್ತರಾಗಿದ್ದ ಪಿ.ತಿಪ್ಪೇಸ್ವಾಮಿ(63) ನಿಧನರಾಗಿರುತ್ತಾರೆ. ಅನಾರೋಗ್ಯ ಹಿನ್ನೆಲೆಯಲ್ಲಿ ಅವರನ್ನು ಬೆಂಗಳೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಿದ್ದು,



ಭಾನುವಾರ ಬೆಳಗಿನ ಜಾವ ಮೃತಪಟ್ಟಿರುತ್ತಾರೆ.

ಪತ್ನಿ ಲಕ್ಷ್ಮಕ್ಕ, ಓರ್ವಪುತ್ರ, ಮೂವರು ಹೆಣ್ಣು ಹಾಗೂ ಅಪಾರ ಬಂಧುಬಗಳವನ್ನು ಅವರುಅಗಲಿದ್ದಾರೆ.ವಾಲ್ಮೀಕಿ ನಗರದ ನಿವಾರಿಯಾಗಿದ್ದ ಅವರು ಬಿ.ಜಿ.ಕೆರೆ ತಾಲ್ಲೂಕಿನವರು. ಅವರ ಅಂತ್ಯಕ್ರಿಯೆ ಕೋಡಿಹಳ್ಳಿ ಜಮೀನಿನಲ್ಲಿ ಭಾನುವಾರ ಸಂಜೆ ನಡೆಯಿತು.

**ಸಂತಾಪ** :ಸ್ನೇಹ ಜೀವಿಯಾಗಿದ್ದ ಪಿ.ತಿಪ್ಪೇಸ್ವಾಮಿ ನಿಧನಕ್ಕೆ ಹೋಟೆಲ್ ಉದ್ಯಮಿ ರಾಮಚಂದ್ರ ಉಡುಪ, ಕಾಂಗ್ರೆಸ್ ಪಕ್ಷದ ಅಲ್ಪಸಂಖ್ಯಾತ ವಿಭಾಗದ ತಾಲ್ಲೂಕು ಅಧ್ಯಕ್ಷ ಅನ್ವರ್ ಮಾಸ್ಟರ್ ಸಂತಾಪ ವ್ಯಕ್ತಪಡಿಸಿದ್ದಾರೆ.




# ಸಮಾಜದಲ್ಲಿ ಪತ್ರಕರ್ತರ ಹೊಣೆ ದೊಡ್ಡದು

» **ದಾವಣಗೆರೆ**

ಪತ್ರಕರ್ತರಿಗೆ ಸಮಾಜದಲ್ಲಿ ಮಹತ್ವದ ಸ್ಥಾನವಿದ್ದು, ಅವರಿಗೆ ಹೊಣೆಗಾರಿಕೆಯೂ ದೊಡ್ಡದಿದೆ. ಹಿರಿಯ ಪತ್ರಕರ್ತರು ಕಿರಿಯರಿಗೆ ಮಾರ್ಗದರ್ಶನ ನೀಡಿ ಸಮಾಜವನ್ನು ಸರಿದಾರಿಗೆ ತರುವ ಕೆಲಸ ಮಾಡಬೇಕೆಂದು ಚನ್ನಗಿರಿ ಶಾಸಕ ಬಸವರಾಜ ಶಿವಗಂಗಾ ಸಲಹೆ ನೀಡಿದರು.

ನಗರದ ದೇವರಾಜ ಅರಸು ಬಡಾವಣೆಯಲ್ಲಿರುವ ಲಯನ್ಸ್ ಕ್ಲಬ್ ಭವನದಲ್ಲಿ ಭಾನುವಾರ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ ಪತ್ರಿಕಾ ದಿನಾಚರಣೆ, ಪತ್ರಿಭಾ ಪುರಸ್ಕಾರ ಹಾಗೂ ಮಾಧ್ಯಮ ಮಾಣಿಕ್ಯ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸ್ತುತ ಸಮಾಜ ಕಲುಷಿತಗೊಂಡಿದ್ದು, ಅದನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವ ಜವಾಬ್ದಾರಿ ಪತ್ರಕರ್ತರ ಮೇಲಿದೆ. ಧೈರ್ಯ ಮತ್ತು ಸತ್ಯಕ್ಕೆ ನಿಷ್ಠರಾಗಿ ನಡೆಯುವುದು ಪತ್ರಿಕಾ ರಂಗಕ್ಕೆ ಪ್ರವೇಶಿಸುವವರು ಮೈಗೂಡಿಸಿಕೊಳ್ಳಬೇಕಾದ ಗುಣಗಳು. ತಮ್ಮ ಸ್ಥಾನಮಾನಕ್ಕೆ ಧಕ್ಕೆ ಬರದಂತೆ ಪತ್ರಕರ್ತರು ಕಾರ್ಯ ನಿರ್ವಹಿಸುವುದು ಅಗತ್ಯವಾಗಿದೆ ಎಂದರು.

ಒಬ್ಬ ಸಾಮಾನ್ಯ ವ್ಯಕ್ತಿ ಇತ್ತೀಚಿಗೆ ನಡೆದ ವಿಧಾನಸಭಾ ಚುನಾವಣೆಯಲ್ಲಿ ಗೆಲುವು ಸಾಧಿಸಲು ಪತ್ರಕರ್ತರ ಪ್ರೋತ್ಸಾಹ ಹಾಗೂ ನೀವು ನಾನು ಮಾಡಿದ ಸಮಾಜ ಸೇವೆಯ ಬಗ್ಗೆ ಬರೆದ ಬರವಣಿಗೆಯಿಂದಲೇ ಇವತ್ತು ಶಾಸಕನಾಗಿ ನಿಮ್ಮ ಮುಂದೆ ನಿಂತಿರುವುದೇ ಸಾಕ್ಷಿಯಾಗಿದೆ. ಅಲ್ಲದೇ ಮಹಾನಗರಪಾಲಿಕೆ ಸದಸ್ಯನಾಗಿನಿಂದ ಈವರೆಗೂ ಸುಮಾರು 15 ವರ್ಷಗಳ ಕಾಲ ನನಗೆ ಪ್ರೋತ್ಸಾಹಿಸುವ ಮೂಲಕ ಜನರ ಸೇವೆ ಮಾಡುವ ಭಾಗ್ಯ ಕಲ್ಪಿಸಿದ್ದೀರಿ ಎಂದು ಪತ್ರಕರ್ತರಿಗೆ ಕೃತಜ್ಞತೆ ಸಲ್ಲಿಸಿದರು.

ಜಗಳೂರು ಮಾಜಿ ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ನನ್ನ ಹೋರಾಟದ ದಿನಗಳಿಂದ



ಪತ್ರಕರ್ತರು ನನಗೆ ಬೆನ್ನೆಲುಬಾಗಿ ನಿಂತು ಸಮಾಜ ಸೇವೆ ಮಾಡಲು ಅವಕಾಶ ಕಲ್ಪಿಸಿದ್ದೀರಿ. ನಿಮಗೆ ನಾನು ಎಂದಿಗೂ ಚಿರ್‍ಋಣಿಯಾಗಿದ್ದೇನೆ ಎಂದರು.ನಾನು ಜಗಳೂರು ಶಾಸಕನಾಗಿ ಅಧಿಕಾರ ನಡೆಸಿದ ಸಂದರ್ಭದಲ್ಲಿ ಸರ್ಕಾರದಿಂದ ಅನುದಾನ ತಂದು ಜಗಳೂರಿನಲ್ಲಿ ಪತ್ರಿಕಾ ಭವನ, ಪತ್ರಕರ್ತರಿಗೆ ವಸತಿ ಸೌಲಭ್ಯ ಕಲ್ಪಿಸಿದ್ದೇನೆ ಎಂದು ತಿಳಿಸಿದರು.

ಸಾನ್ನಿಧ್ಯ ವಹಿಸಿ ಮಾತನಾಡಿದ ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ ಹುಬ್ಬಳ್ಳಿ ವಲಯದ ಸಂಚಾಲಕರಾದ ರಾಜಯೋಗಿನಿ ಬ್ರಹ್ಮಾಕುಮಾರಿ ನಿರ್ಮಲಾಜೀ, ಸ್ವಾತಂತ್ರ ಪೂರ್ವದಲ್ಲಿ ಪತ್ರಿಕೋದ್ಯಮ ಸ್ವಾತಂತ್ರ ಹೋರಾಟಗಳಿಗೆ ನೆರವಾಗಿತ್ತು. ಮಹಾತ್ಮ ಗಾಂಧೀಜಿಯವರ ಸತ್ಯ, ಅಹಿಂಸೆ ಹೋರಾಟಗಳಿಗೆ ಸಮಾಚಾರ ಪತ್ರಿಕೆಗಳು ನೆರವು ಕೊಟ್ಟಿದ್ದವು. ಈಗ ಸಕಾರಾತ್ಮಕ ವಿಚಾರಗಳು, ಸಕಾರಾತ್ಮಕ ಚಿಂತನೆಗಳನ್ನು ಇಂದು ಪತ್ರಿಕೋದ್ಯಮ ಬೆಳೆಸಬೇಕು. ಕಠಿಣ ಪರಿಸ್ಥಿತಿಯಲ್ಲೂ ಸಾಕಾರಾತ್ಮಕ ವಿಚಾರಗಳನ್ನು ಹೊಂದುವುದನ್ನು ಬಿಂಬಿಸಬೇಕೆಂದರು.

ಇಡೀ ವಿಶ್ವಕ್ಕೆ ಈಗ ಶಾಂತಿಯ ಮಹಾಮಂತ್ರ ಬೇಕಿದೆ. ಯಂತ್ರ ಮತ್ತು ತಂತ್ರಗಳು ಅಲ್ಪ ಸುಃಖವನ್ನು ಮಾತ್ರ ಕೊಡುತ್ತವೆ. ಶಾಂತಿಯಿಂದ ಮಾತ್ರ ಮನುಷ್ಯನಿಗೆ ನಿಜವಾದ ನೆಮ್ಮದಿ ಸಿಗಲು ಸಾಧ್ಯ. ಧರ್ಮ ಮಾರ್ಗದಿಂದ ಶಾಂತಿಯ ಮಂತ್ರ ಅಳವಡಿಸಿಕೊಳ್ಳಬೇಕು. ಅರಿಷಡ್ವರ್ಗಗಳಿಂದಮನುಷ್ಯನಕರ್ಮಗಳು ಕುಕರ್ಮಗಳಾಗುತ್ತಿವೆ. ರೋಟಿ, ಕಪಡ, ಮಕಾನ್ ಜೀವನದ ಏಕೈಕ ಉದ್ದೇಶವಲ್ಲ. ಮನುಷ್ಯ ಪಂಚೇಂದ್ರೀಯಗಳ ದಾಸ ಆಗದೆ ಜೀವನದಲ್ಲಿಪರಿವರ್ತನೆಮಾಡಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಮುದ್ರಣ ಮಾಧ್ಯಮದ ವಿಭಾಗದಿಂದ ವಿಜಯವಾಣಿ ಸ್ಥಾನಿಕ ಸಂಪಾದಕ ಎಂ.ಬಿ.ನವೀನ್, ವಿದ್ಯುನ್ಮಾನ ಮಾಧ್ಯಮದ ವಿಭಾಗದಿಂದ ಸುವರ್ಣ ನ್ಯೂಸ್‌ನ ಜಿಲ್ಲಾ ವರದಿಗಾರ ಡಾ.ಸಿ.ವರದರಾಜು, ಛಾಯಾಗ್ರಹಣದಲ್ಲಿ ಜೈನ್ ಸ್ಟುಡಿಯೋದ ಹೇಮಚಂದ್ರ ಜೈನ್, ಜಾಹೀರಾತು ವಿಭಾಗದಲ್ಲಿ ಮ್ಯಾಗ್ನಮ್ ಮೀಡಿಯಾದ ಕೆ.ವಿ.ಪ್ರದೀಪ್, ಸಿಬ್ಬಂದಿ ವಿಭಾಗದಲ್ಲಿ ಮಲ್ನಾವಾಣಿಯ ಎಸ್.ಸುರೇಶ್‌ಬಾಬು, ಡಿಟಿಪಿ–ಡಿಸೈನರ್ ವಿಭಾಗದಲ್ಲಿ ಜನತಾವಾಣಿಯ ಪುಟ ವಿನ್ಯಾಸಕ ಎಸ್.ಜೆ.ಹನುಮಂತರಾಜ್, ಮುದ್ರಣ ವಿಭಾಗದಲ್ಲಿ ಜಯಂತ್ ಆಫ್‌ಸೆಟ್‌ನ ಬಿ.ಅಣ್ಣಪ್ಪ, ವಿತರಕರ ವಿಭಾಗದಲ್ಲಿ ಹಿರಿಯ ಪತ್ರಿಕಾ ವಿತರಕ ಕೊಟ್ರೇಶ್ ಸೋಮನಹಳ್ಳಿ ಅವರಿಗೆ 'ಮಾಧ್ಯಮ ಮಾಣಿಕ್ಯ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಅದೇ ರೀತಿ ತಾಲೂಕು ಮಟ್ಟದ ವಿಭಾಗದಲ್ಲಿ ಹರಿಹರ ಉದಯವಾಣಿ ವರದಿಗಾರ ಬಿ.ಎಂ.ಸಿದ್ದಲಿಂಗಸ್ವಾಮಿ, ಹೊನ್ನಾಳಿ ಪ್ರಜಾವಾಣಿ ವರದಿಗಾರ ಎನ್.ಕೆ.ಆಂಜನೇಯ, ಜಗಳೂರು ಪ್ರಜಾವಾಣಿ ವರದಿಗಾರ ಡಿ.ಶ್ರೀನಿವಾಸ್, ಚನ್ನಗಿರಿ ಪ್ರಜಾವಾಣಿ ವರದಿಗಾರ ಎಚ್.ವಿ.ನಟರಾಜ್ ಅವರಿಗೆ 'ಮಾಧ್ಯಮ ಮಾಣಿಕ್ಯ' ಪ್ರಶಸ್ತಿ, ವಾರ್ತಾ ಇಲಾಖೆಯ ನಿವೃತ್ತ ನೌಕರ ಬಿ.ಎಸ್.ಬಸವರಾಜ್ ಅವರಿಗೆ 'ವಾರ್ತಾ ಮಾಧ್ಯಮ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎಸ್ಸೆಸ್ಸೆಲ್ಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿ.ಎಸ್.ಸಹನಾ, ಚಿನ್ಮಯ್ ಎಂ. ಪಾಟೀಲ್, ಎಸ್.ಎಚ್.ಅನನ್ಯ, ಎಂ.ಪ್ರಿಯಾಂಕ, ಆಸ್ಮಿತ ಎಸ್.ಶೆಟ್ಟರ್, ಎಸ್. ಎಚ್.ಧನುಶ್, ಎಂ.ಎ.ಸೂರ್ಯತೇಜು ಅವರಿಗೆ 'ವಿದ್ಯಾಸಿರಿ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಎಸ್ಸೆಸ್ಸೆಲ್ಸಿ ಕನ್ನಡ ವಿಷಯದಲ್ಲಿ 125ಕ್ಕೆ 125 ಅಂಕ ಪಡೆದ ಕು. ಎಂ.ಪ್ರಿಯಾಂಕ, ಹಾಗೂ 125ಕ್ಕೆ 123ರ ಅಂಕ ಪಡೆದ ಟಿ.ಎಂ.ಗಗನ್‌ದೀಪ್ ಅವರಿಗೆ 'ವಿದ್ಯಾಸಿರಿ ಮತ್ತು ಕನ್ನಡಸಿರಿ' ಪ್ರಶಸ್ತಿ, ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ಯು.ಎಂ.ಕೇದಾರಸ್ವಾಮಿ, ಶ್ರೀನಿಧಿ ಎಂ.ಪಾಟೀಲ್, ಜಿ.ಎಂ.ಸ್ಫೂರ್ತಿ ಅವರಿಗೆ 'ವಿದ್ಯಾರತ್ನ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ಇದೇ ಸಂದರ್ಭದಲ್ಲಿ ಚನ್ನಗಿರಿ ಶಾಸಕ ಬಸವರಾಜ ಶಿವಗಂಗಾ, ಜಗಳೂರು ಮಾಜಿ ಶಾಸಕ ಎಸ್.ವಿ.ರಾಮಚಂದ್ರ, ಜಿಲ್ಲಾ ವರದಿಗಾರರ ಕೂಟದ ಅಧ್ಯಕ್ಷ ಕೆ.ಏಕಾಂತಪ್ಪ,ಹರವಿವಿಧೋದ್ದೇಶಸಹಕಾರ ಸಂಘದ ಅಧ್ಯಕ್ಷ ಬಿ.ಸಿ.ಉಮಾಪತಿ, ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ ರಾಯ್ಕರ್, ತಂಜೀಮ್ ಮುಸ್ಲಿಮಿನ್ ಫಂಡ್ ಅಸೋಸಿಯೇಷನ್ ಅಧ್ಯಕ್ಷ ದಾದುಸೇಠ್, ಮಹಾನಗರಪಾಲಿಕೆ ಸದಸ್ಯ ಕೆ.ಚಮನ್‌ಸಾಬ್, ಲಯನ್ಸ್ ಕ್ಲಬ್‌ನ ಅಧ್ಯಕ್ಷ ಉಮೇಶ್ ನೀಲಿ, ಹಿರಿಯ ಪತ್ರಕರ್ತ ಹೆಚ್.ಬಿ.ಮಂಜುನಾಥ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕದ ಅಧ್ಯಕ್ಷ ಇ.ಎಂ.ಮಂಜುನಾಥ, ಪ್ರಧಾನ ಕಾರ್ಯದರ್ಶಿ ಎ.ಫಕೃದ್ದೀನ್, ಖಜಾಂಚಿ ಎಸ್.ವಿ. ಬದರೀನಾಥ್, ಕಾರ್ಯದರ್ಶಿಗಳಾದ ಜೆ.ಎಸ್.ವೀರೇಶ್, ಜಿ . ಆ ರ್ . ನಿ ಂ ಗ್ ೋ ಜಿ ರಾ ವ್ , ಉಪಾಧ್ಯಕ್ಷರಾದ ಎಚ್.ಎನ್.ಪ್ರಕಾಶ್, ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯ ಕೆ.ಚಂದ್ರಣ್ಣ, ರಾಷ್ಟ್ರೀಯ ಮಂಡಳಿ ಸದಸ್ಯ ಎಸ್.ಕೆ.ಒಡೆಯರ್, ನಿರ್ದೇಶಕರುಗಳಾದ ಸಿ.ವೇದಮೂರ್ತಿ, ಎಂ.ಗುರುಮೂರ್ತಿ, ಹೆಚ್.ಚಂದ್ರಶೇಖರ್, ಬಿ.ಎಸ್. ಮುದ್ದಯ್ಯ, ರಾಂಪ್ರಸಾದ್, ನಂದನಕುಮಾರ್,ವಿ.ಬಿ.ಅನಿಲ್‌ಕುಮಾರ್, ಕೆ.ಸಿ.ಮಂಜುನಾಥ್, ಇಂಧುಶೇಖರ್ ನಿಶಾನಿಮಠ, ತಾಲ್ಲೂಕು ಅಧ್ಯಕ್ಷರುಗಳಾದ ಚಿದಾನಂದ್, ವೀರೇಶ್ ಪ್ರಸಾದ್, ಶಾಂಭವಿ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರಾರ್ಥನೆ ಕು.ಪಿ.ಜ್ಞಾನ ಹಾಗೂ ಕಾರ್ಯಕ್ರಮವನ್ನು ಶ್ರೀಮತಿ ಹೆಚ್. ಅನಿತಾ ಹಾಗೂ ಶ್ರೀಮತಿ ಯಶೋಧ ಅಗಡಿಮಠ ನಡೆಸಿಕೊಟ್ಟರು.

# ಶಿಕ್ಷಣ ಸಂಸ್ಥೆಗಳ ಪ್ರಗತಿಗೆ ಪ್ರಾಮಾಣಿಕ ಯತ್ನ: ಯಾದಲಗಟ್ಟೆ ಜಗನ್ನಾಥ

» **ಚಳ್ಳಕೆರೆ**

ತಾಲ್ಲೂಕಿನಾದ್ಯಂತ ಕಾರ್ಯನಿರ್ವಹಿಸುತ್ತಿರುವ ಅನುದಾನ ರಹಿತ ಖಾಸಗಿ ಶಿಕ್ಷಣ ಸಂಸ್ಥೆಗಳ ನವೀಕರಣ, ಇಲಾಖೆಯ ನೂತನ ಆದೇಶ ಹಾಗೂ ಶಿಕ್ಷಣ ನೀತಿಯ ಬಗ್ಗೆ ಇಲ್ಲಿನ ಪ್ರವಾಸಿ ಮಂದಿರದಲ್ಲಿ ಅನುದಾನ ರಹಿತ ಶಿಕ್ಷಣ ಸಂಸ್ಥೆಗಳ ಒಕ್ಕೂಟ ಚರ್ಚೆ ನಡೆಸಿತು.

ಒಕ್ಕೂಟದ ಅಧ್ಯಕ್ಷ ಯಾದಲಗಟ್ಟೆ ಜಗನ್ನಾಥ ಮಾತನಾಡಿ, ಸರ್ಕಾರದ ಆದೇಶದ ಪ್ರಕಾರ ಈಗಾಗಲೇ ಖಾಸಗಿ ಅನುದಾನ ರಹಿತ ಶಾಲೆಗಳು ಪ್ರಾರಂಭವಾಗಿ ಎರಡು ತಿಂಗಳು ಕಳೆಯುತ್ತಾ



ಬಂದಿದೆ. ಬಹುತೇಕ ಖಾಸಗಿ ವಿದ್ಯಾಸಂಸ್ಥೆಗಳಲ್ಲಿ ಪ್ರವೇಶವೂ ಸೇರಿದಂತೆ ಹಲವಾರು ಶೈಕ್ಷಣಿಕ ಅಭಿವೃದ್ದಿಯ ಬಗ್ಗೆ ಸಂಸ್ಥೆಗಳು ಕಾಯೋನ್ಮುಖವಾಗಿವೆ. ಶಿಕ್ಷಣ ಸಂಸ್ಥೆಯ ನಿಯಮಗಳನ್ನು ಉಲ್ಲಂಘಿಸದೆ ಖಾಸಗಿ ಸಂಸ್ಥೆಗಳನ್ನು ನಡೆಸಿಕೊಂಡು ಹೋಗುವ ಸ್ಥಿತಿಯಲ್ಲೂ ಸಹ ಶಿಕ್ಷಣ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿವೆ. ಉತ್ತಮ ಸೇವೆ ಸಲ್ಲಿಸಿದ ಶಿಕ್ಷಕರಿಗೆ ಶಿಕ್ಷಕ ಪ್ರಶಸ್ತಿ ಹಾಗೂ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಆಚರಿಸಲು ಸಭೆಯಲ್ಲಿ ತೀರ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಖಾಸಗಿ ಅನುದಾನಿತ ಶಾಲಾ ಶಿಕ್ಷಕರ ಒಕ್ಕೂಟಕ್ಕೆ ನಿವೇಶನವನ್ನು ಪಡೆಯಲು ನಿರ್ಧರಿಸಿದರು.

ಕಾರ್ಯದರ್ಶಿ ಪಿ.ದಯಾನಂದ, ನಿರ್ದೇಶಕರಾದ ಡಾ.ಕೆ.ಎಂ.ಜಯಕುಮಾರ್, ಕೆ.ಪಿ.ನಾಗಭೂಷಣ, ಟಿ.ಚಿಕ್ಕಣ್ಣ, ನಾಗೀರೆಡ್ಡಿ, ಎನ್.ಗೌರೀಶ್, ಶೇಖ್‌ಪೀರ್, ಚಂದ್ರಣ್ಣ, ರವಿಕುಮಾರ್, ರಾಜಕುಮಾರ್, ರಂಜಿತಾ, ಚಿದಾನಂದ ಮುಂತಾದವರು ಭಾಗವಹಿಸಿದ್ದರು.

# ಚಿಕ್ಕಮಗಳೂರಲ್ಲಿ ಧಾರಾಕಾರ ಮಳೆ; ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ತುಂಗಾ ನದಿ

» **ಚಿಕ್ಕಮಗಳೂರು**

ಮಲೆನಾಡು ಭಾಗದಲ್ಲಿ ಧಾರಾಕಾರ ಮಳೆ ಹಿನ್ನೆಲೆ ತುಂಗಾ ನದಿ



ಅಪಾಯದ ಮಟ್ಟ ಮೀರಿ ಹರಿಯುತ್ತಿರುವ ಹಿನ್ನೆಲೆ ಶೃಂಗೇರಿ ದೇವಾಲಯ ಸುತ್ತಮುತ್ತಲಿನ ಪ್ರದೇಶಗಳು ಜಲಾವೃತಗೊಂಡಿವೆ. ಗಾಂಧಿ ಮೈದಾನ, ಪ್ಯಾರಲ್ ರಸ್ತೆಯ ಮೇಲೆ ನದಿ ರಭಸವಾಗಿ ಹರಿಯುತ್ತಿದೆ. ಶೃಂಗೇರಿ ಪಟ್ಟಣದಿಂದ ಗಾಂಧಿ ಮೈದಾನಕ್ಕೆ ಸಂಪರ್ಕಿಸುವ ರಸ್ತೆ ಮುಳುಗಡೆಯಾಗಿದೆ. ತಡವಾಗಿಯಾದರೂ ರಾಜ್ಯದಲ್ಲಿ ಮುಂಗಾರು ಚುರುಕುಗೊಂಡಿದೆ. ಕಳೆದ ಒಂದೆರಡು ವಾರದಿಂದ ಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಕಾವೇರಿ, ಭೀಮಾ ಸೇರಿ ಪ್ರಮುಖ ನದಿಗಳ ನೀರಿನಮಟ್ಟದಲ್ಲಿ ದಿಢೀರ್ ಏರಿಕೆಯಾಗಿ ಕರಾವಳಿ, ಮಲೆನಾಡು ಸೇರಿ ರಾಜ್ಯದ ಒಂಬತ್ತು ಜಿಲ್ಲೆಗಳಲ್ಲಿ ಪ್ರವಾಹದ ಆತಂಕ ಕಾಣಿಸಿಕೊಂಡಿದೆ. ಇನ್ನು ಕೃಷ್ಣ, ಭೀಮಾ, ವರದಾ, ದೂದಗಂಗಾ, ಮಲಪ್ರಭಾ, ತುಂಗಾ, ಶರಾವತಿ, ನೇತ್ರಾವತಿ, ಕುಮಾರಧಾರಾ, ಕಾಳಿ, ಕಾವೇರಿ, ಲಕ್ಷ್ಮಣ ತೀರ್ಥ ಸೇರಿ ರಾಜ್ಯದಲ್ಲಿ ಹಲವು ನದಿಗಳು ಅಪಾಯಮಟ್ಟದಲ್ಲಿ ಹರಿಯುತ್ತಿದ್ದು, ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಜನಜೀವನ ಅಸ್ತ ವ್ಯಸ್ತಗೊಂಡಿದೆ. ಭಾರೀ ಮಳೆ ಕಾರಣ ಕರಾವಳಿ, ಮಲೆನಾಡು, ಉತ್ತರ ಕರ್ನಾಟಕದ ಕೆಲ ಜಿಲ್ಲೆಗಳಲ್ಲಿ ಶಾಲೆಗೆ ರಜೆ ಘೋಷಿಸಲಾಗಿದೆ.

## ಪ್ರಮುಖ ಸುದ್ದಿ

# 2500 ಸಿಮೇಂಟ್ ಸ್ಲ್ಯಾಬ್ ಪ್ಲೇಟ್ ಅಳವಡಿಕೆ

» **ಹೊಳಲ್ಕೆರೆ**

ಪಟ್ಟಣದ 1ನೇ ವಾರ್ಡ್‌ನಲ್ಲಿ ನೈಮಾಲ್ಯ ಕಾಯ್ದುಕೊಳ್ಳಲು ಸ್ವಚ್ಚತೆಗೆ ಒತ್ತು ನೀಡಿದೆ. ಹಾಗಾಗಿ ವಾರ್ಡ್‌ನಲ್ಲಿರುವ ಎಲ್ಲಾ ಚರಂಡಿಗಳ ಮೇಲೆ 2500 ಸಿಮೇಟ್ ಸ್ಲ್ಯಾಬ್ ಪ್ಲೇಟ್‌ಗಳನ್ನು ಆವಳಡಿಸಲಾಗುತ್ತಿದೆ ಎಂದು ಪುರಸಭೆಯ ಸದಸ್ಯರಾದ ಹೆಚ್. ಆರ್.ನಾಗರತ್ನವೇದಮೂರ್ತಿ ತಿಳಿಸಿದ್ದಾರೆ.

ಅವರು ಪಟ್ಟಣದ 1ನೇ ವಾರ್ಡ್‌ನಲ್ಲಿರುವ ಚರಂಡಿಗಳ ಮೇಲೆ ಸೀಮೇಟ್ ಪ್ಲೇಟ್ ಅಳವಡಿಸುವ ಕೆಲಸಕ್ಕೆ ಚಾಲನೆ ನೀಡಿ ಮಾತನಾಡಿದರು.

1ನೇ ವಾರ್ಡ್ ಕೊಳಚೆ ಪ್ರದೇಶದ ವ್ಯಾಪ್ತಿಗೆ ಸೇರಿದೆ. ವಾರ್ಡ್‌ನಲ್ಲಿ ಹೆಚ್ಚಿನ ನೈಮಾಲ್ಯ ಕಾಪಾಡಿ ಜನರ ಆರೋಗ್ಯದ ರಕ್ಷಣೆಗೆ ಬೇಕಾದ ಅಗತ್ಯ ಕ್ರಮ ಕೈಗೊಳ್ಳಲು ಪ್ರತಿ ಚರಂಡಿ ಮೇಲೆ ಸಿಮೇಟ್ ಸ್ಲ್ಯಾಬ್ ಹಾಕುತ್ತಿದ್ದೇವೆ. ವಾರ್ಡ್‌ನಲ್ಲಿರುವ ಪ್ರತಿ ಚರಂಡಿ ಮೇಲೆ ಸ್ಲ್ಯಾಬ್ ಹಾಕಿ ಸ್ವಚ್ಚತೆಗೆ ಒತ್ತು ನೀಡುತ್ತೇವೆ. ಚರಂಡಿ ಯಿಂದ ಬರುವ ವಾಸನೆ ನಿಯಂತ್ರಣದ ಜತೆ ಸ್ವಚ್ಚತೆಗೆ ಹೆಚ್ಚು ಅನುಕೂಲವಾಗಲಿದೆ ಎಂದರು.

ಪಟ್ಟಣದ ಒಂದನೇ ವಾರ್ಡ್ ಅಭಿವೃದ್ಧಿ ಈಗಾಗಲೆ ಸಾಕಷ್ಟು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಕೊಳಚೆಯ ಗುಂಡಿಯನ್ನು ಮುಚ್ಚಿ ಅ ಸ್ಥಳದಲ್ಲಿ ಅಭಿವೃದ್ಧಿ ಸಾಧಿಸುವ ಉದ್ದೇಶದಿಂದ ಶಾಸಕರ ಸಹಾಯದಿಂದ ಗಣಪತಿ ದೇವಸ್ಥಾನದ ಎದುರು 3.5ಕೋಟಿ ಅನುದಾನದಲ್ಲಿ ನಾಯಕ ಸಮುದಾಯದ



ಕಾಲೇಜು ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯ ನಿರ್ಮಾಣ ಮಾಡಿದೆ. 1 ಕೋಟಿ ಅನುದಾನದಲ್ಲಿ ಬಳೆಗಾರ ಹಟ್ಟಿಯಿಂದ ಹಿರೆಕೆರೆ ತನಕ ಬೃಹತ್ ಚರಂಡಿ ನಿರ್ಮಾಣ ಮಾಡಿದೆ. ಕೋಳಚೆ ನಿರ್ಮೂನ ಮಂಡಳಿ ಸಹಯೋಗದಲ್ಲಿ ವಾರ್ಡ್‌ನಲ್ಲಿ 120 ಹೊಸ ಮನೆಗಳನ್ನು ನಿರ್ಮಾಣ ಮಾಡಿದೆ. ವೇಣುಗೋಪಾಲಸ್ವಾಮಿ ದೇವಸ್ಥಾನದಲ್ಲಿ ಶಾಸಕ ಅನುದಾನದಲ್ಲಿ ಹೈಮಾಸ್ಟ್ ಲೈಟ್ ಅಳವಡಿಸಿದೆ. ಎರಡು ಹೊಸ ಅಂಗನವಾಡಿ ಕೇಂದ್ರಗಳ ಕಟ್ಟಡ ನಿರ್ಮಾಣ ಮಾಡಿದೆ. ಕುಡಿಯುವ ನೀರಿನ ಹಳೆಕಾಲದ ಪೈಪ್‌ನಲ್ಲಿ ನೀರು ಸರಭರಾಜು ಸರ್ಮಪಕವಿಲ್ಲದ ಪರಿಣಾಮ 10 ಲಕ್ಷ ಅನುದಾನದಲ್ಲಿ ಕುಡಿಯುವ ನೀರಿನ ಹೊಸ ಪೈಪ್ ಲೈನ್ ಅಳವಡಿಸಿದೆ. ವಾರ್ಡ್‌ನಲ್ಲಿರುವ ಜನರಿಗೆ 24/7 ನೀರು ಪೂರೈಕೆ ಮಾಡಲು ಹಳೆ ಬೋರ್‌ವೇಲ್ ಜತೆ ಹೊಸ 3 ಬೋರ್‌ವೇಲ್ ಹಾಕಿಸಿದೆ. ಅಗತ್ಯವಿರುವ ಕಡೆಗಳಲ್ಲಿ ಚರಂಡಿ, ಸಿಸಿ ರಸ್ತೆ ನಿರ್ಮಾಣ ಮಾಡಿದೆ ಎಂದು ತಿಳಿಸಿದರು. ಗುತ್ತಿಗೆದಾರ ರಾಜು, ಸ್ವಾಮಿ, ಸಿಂಕದರ್, ತಿಮ್ಮೇಶ್, ರಾಜಪ್ಪ ಸೇರಿದಂತೆ ವಾರ್ಡ್‌ನ ನಾಗರಿಕರು ಉಪಸ್ಥಿತರಿದ್ದರು.

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T